ಶ್ರೀ ಚಕ್ರ ಮಹಿಮೆ



ಪ್ರಕಾಶಕರು:
ಶ್ರೀ|| ಶ್ರೀ|| ಶಿವಗಂಗಾ ಮಠ

ಶ್ರೀ ಚಕ್ರ ಮಹಿಮೆ

ಲೇಖಕರು: ಉಮಾನಂದ

ಪ್ರಕಾಶಕರು :

ಶ್ರೀ॥ ಶಿವಗಂಗಾ ಮಠ

ಶ್ರೀಮತಿ ಶಾರದಮ್ಮ ವಿ. ನರಸಿಂಹಮೂರ್ತಿ
ಅವರ ಸೇವಾರ್ಥ

ಬೆಲೆ: ಒಂದು ರೂಪಾಯಿ.

shrinath.udupa@gmail.com

ಶ್ರೀ ಶಿವಗಂಗಾ ಕ್ಷೇತ್ರದಲ್ಲಿ ನೆಲಸಿರುವ ಶ್ರೀ ಶಾರದಾಂಬಾ

(ಅಮೃತ ಶಿಲಾ ವಿಗ್ರಹ)

ಶ್ರೀ ಚಕ್ರ ಮಹಿಮೆ

ಚರಾಚರಾತ್ಮಕವಾದ ಈ ಪ್ರಪಂಚವನ್ನು ಚಿತ್ರವಿಚಿತ್ರ ರೀತಿಯಿಂದ ಸೃಷ್ಟಿ ಮಾಡಿ, ಎಲ್ಲವನ್ನೂ ತಾನೇ ಆವರಿಸಿ, ನಮ್ಮ ಇಂದ್ರಿಯಗಳಿಗೆ ಅಗೋಚರವಾದ ರೀತಿಯಲ್ಲಿ ಅವುಗಳನ್ನು ಬೆಳಗಿಸುತ್ತ, ಕಾಲದೇಶಗಳ ಅಳತೆಗೆ ಸಿಲುಕದೆ ತಾನೇ ತಾನಾಗಿ ಮೆರೆಯುವ ಪರಮಾತ್ಮನ ಮಹಿಮೆಯು ಅನಂತವಾಗಿದೆ. ನಾಮ ರೂಪಗಳು ಮಾಯಾ ಕಲ್ಪಿತಗಳಾದುದರಿಂದ ಆತನನ್ನು ಕೇವಲ ಸಚ್ಚಿದಾನಂದ ಸ್ವರೂಪನೆಂತಲೇ ಶ್ರುತಿಗಳು ಮೊರೆಯಿಡುತ್ತಿವೆ. ನಾಮ ರೂಪಗಳು ಒಂದ ನ್ನೊಂದು ಆಶ್ರಯಿಸಿಕೊಂಡಿವೆ. ಒಂದು ರೂಪವನ್ನು ಕಂಡೊಡನೆಯೇ ಅದರ ಹೆಸರು ನಮಗೆ ಗೋಚರವಾಗುತ್ತದೆ. ಅಂತೆಯೇ ಒಂದು ಹೆಸರನ್ನು ಕೇಳಿ ದೊಡನೆಯೇ ಆ ಹೆಸರಿನಿಂದ ಕರೆಯಿಸಿಕೊಳ್ಳುವ ವಸ್ತುವೂ ನಮ್ಮ ಸ್ಮೃತಿಪಥಕ್ಕೆ ಬರುತ್ತದೆ. ನಾಮರೂಪಸಹಿತವಾದುದು ಏಕ ಕಾಲದಲ್ಲಿ ಎಲ್ಲಾ ದಿಕ್ಕು ಗಳಲ್ಲಿಯೂ ಎಲ್ಲಾ ರೂಪದಿಂದಲೂ ತಾನಿರುವುದು ಅಸಂಭವ.

ಅಸ್ತಿ ಭಾತಿ ಪ್ರಿಯಂ ರೂಪಂ ನಾಮ ಚೇತ್ಯಂಶಪಂಚಕಂ ।
ಆದ್ಯತ್ರಯಂ ಬ್ರಹ್ಮರೂಪಂ ಮಾಯಾರೂಪಂ ತತೋ ದ್ವಯಂ ॥

ಸತ್, ಚಿತ್, ಆನಂದ, ನಾಮ, ರೂಪಗಳೆಂಬ ಈ ಐದಕ್ಕೂ ಅಂಶ ಪಂಚಕವೆಂದು ವ್ಯವಹಾರ. ಇವುಗಳಲ್ಲಿ ಮೊದಲನೆಯ ಮೂರು (ಸಚ್ಚಿದಾ ನಂದಗಳು) ಪರಬ್ರಹ್ಮನಿಗೊಬ್ಬನಿಗೇ ಸಲ್ಲುತ್ತವೆ. ಆ ಬಳಿಕ ಮಿಕ್ಕ (ನಾಮ ರೂಪಗಳೆಂಬ) ಇನ್ನೆರಡು ಮಾಯಾ ರೂಪಗಳು.

ಶ್ರುತಿಗಳೂ ಕೂಡ ಪರಮಾತ್ಮನನ್ನು ನಿರ್ಗುಣ ನಿರಂಜನ, ನಿಷ್ಕಳಂಕ ನೀರೂಪ, ಅಪ್ರಮೇಯ, ಕೇವಲ ಸಚ್ಚಿದಾನಂದ ಸ್ವರೂಪನೆಂಬುದಾಗಿಯೇ

shrinathbtuppa@gmail.com

ಸಾರುತ್ತಿವೆ. ಇಂತು ವಿಲಕ್ಷಣನಾದ ಪರಮಾತ್ಮನನ್ನು ನಾವು ಉಪಾಸಿಸುವ ಬಗೆಯಾದರೂ ಯಾವುದು ?

ಚಿನ್ಮಯಸ್ಯಾದ್ವಿತೀಯಸ್ಯ ನಿಷ್ಕಳಸ್ಯಾ ಶರೀರಿಣಃ ।
ಉಪಾಸಕಾನಾಂ ಕಾರ್ಯಾರ್ಥಂ ಬ್ರಹ್ಮಣೋ ರೂಪಕಲ್ಪನಾ ।
ರೂಪಾಸ್ಥಾನಾಂ ದೇವತಾನಾಂ ಪುಂಸ್ತ್ರ್ಯಂಗಾಸ್ತ್ರಾದಿ ಕಲ್ಪನಾ ।

ಇತ್ಯಾದಿ ಪ್ರಮಾಣಾನುಗುಣವಾಗಿ ಕೇವಲ ಸಚ್ಚಿದಾನಂದಾತ್ಮಕನಾದ ಪರಮಾತ್ಮನಿಗೆ ನಮ್ಮ ಉಪಾಸನೆಯು ಸಲುವಾಗಿ ಒಂದು ರೂಪವನ್ನು ಕಲ್ಪಿಸಿ ಅದಕ್ಕೆ ತಕ್ಕಂತೆ ಹೆಸರಿಟ್ಟು ಪುಲಿಂಗ ಸ್ತ್ರೀಲಿಂಗ ಭೇದವನ್ನು ಕಲ್ಪಿಸಿ, ಅಸ್ತ್ರ, ಶಕ್ತಿ, ವಾಹನ, ಪರಿವಾರ ಮುಂತಾದುವನ್ನು ಅಳವಡಿಸಿ ಉಪಾಸನೆ ಮಾಡುತ್ತಿದ್ದೇವೆ. ಇಂತು ಕಲ್ಪಿತವಾದ ಆ ಮೂರ್ತಿ (ಸಗುಣ)ಯ ವಿಷಯಗಳಾದ ಮಂತ್ರಗಳೂ ಯಂತ್ರಗಳೂ ಹೇರಳವಾಗಿವೆ. ಶಾಸ್ತ್ರಗಳು ಯಂತ್ರ, ಮಂತ್ರ, ವಿಗ್ರಹಗಳಿಗೆ ಅಭೇದವನ್ನೇ ಬೋಧಿಸುತ್ತವೆ. "ಮನನಾತ್ ತ್ರಾಣನಾನ್ಮಂತ್ರಃ" ಮನನ ಮಾಡುವುದರ ಮೂಲಕ ಉಪಾಸಕನನ್ನು ಕಾಪಾಡುತ್ತದೆಯಾಗಿ ಇದಕ್ಕೆ ಮಂತ್ರವೆಂದು ಹೆಸರು.

"ವಿನಾ ಯಂತ್ರೇಣ ಚೇತ್ ಪೂಜಾ ದೇವತಾ ನ ಪ್ರಸೀದತಿ" ಯಂತ್ರ ಅಥವಾ ವಿಗ್ರಹವಿಲ್ಲದೆ ಪೂಜೆ ಮಾಡುವುದಾದರೂ ಯಾರಿಗೆ ? ಇಂತು ಪೂಜೆ ಮಾಡಿದಲ್ಲಿ ದೇವತೆಯೂ ಪ್ರಸನ್ನೆಯಾಗುವುದಿಲ್ಲ. ಈ ಕಾರಣದಿಂದಾಗಿ ನಾವು ಮಾಡತಕ್ಕ ಪೂಜಾದಿಗಳಿಗೆ ಯಂತ್ರ ಅಥವಾ ವಿಗ್ರಹವು ಅತ್ಯಾವಶ್ಯಕವೆಂಬ ಅಂಶವು ಸ್ಥಿರವಾಯಿತು, ಮಂತ್ರ ಸಮೂದಾಯದಲ್ಲಿ ವಿಷ್ಣು ದೇವತಾ ಮಂತ್ರಗಳು ಹೆಚ್ಚಿನ ಮಹಿಮೆಯುಳ್ಳವು. ಅವುಗಳಿಗಿಂತಲೂ ದುರ್ಗಾ ಮಂತ್ರಗಳ ಪ್ರಭಾವವು ಹೆಚ್ಚಿನದು, ಹೀಗೆಯೇ ಅನುಕ್ರಮವಾಗಿ ಗಣಪತಿ, ಸೂರ್ಯ, ಶಿವ, ಲಕ್ಷ್ಮೀ, ಸರಸ್ವತೀ, ಗಿರಿಜಾ, ವಾರಾಹೀ, ಶ್ಯಾಮಲಾ, ಮುಂತಾದ ದೇವತೆಗಳ ಮಂತ್ರಗಳು ಒಂದಕ್ಕಿಂತಲೂ ಒಂದು ಅಧಿಕ ಮಹಿಮೆಯುಳ್ಳವು. ಲಲಿತಾ ಮಂತ್ರವು ಈ ಹಿಂದೆ ಹೇಳಿದ ಎಲ್ಲಾ ಮಂತ್ರಗಳಿಗಿಂತಲೂ ಅಧಿಕ ಪ್ರಭಾವ

shrinath.udupa@gmail.com

ಯುಕ್ತವಾದುದು. ಈ ವಿಷಯವು ಬ್ರಹ್ಮೋತ್ತರ ಖಂಡದ ೪೩ನೆಯ ಅಧ್ಯಾಯದಲ್ಲಿ ವರ್ಣಿತವಾಗಿದೆ. ಈ ಲಲಿತಾ ಮಂತ್ರವು "ಕಾದಿವಿದ್ಯೆ, ಹಾದಿವಿದ್ಯೆ" ಎಂಬುದಾಗಿ ಎರಡು ವಿಧವಾಗಿದೆ. "ವಿದ್ಯಾದ್ವಯ ಮಿದಂ ಭದ್ರೇ ! ದೇವಾನಾಮಪಿ ದುರ್ಲಭಂ". ಮಂಗಳಾಂಗಿ ! ಈ ವಿದ್ಯೆಗಳೆರಡೂ ದೇವತೆಗಳಿಗೂ ದುರ್ಲಭವೆಂಬುದಾಗಿ ಶ್ರೀ ಶಂಕರನೇ ತನ್ನ ಮಡದಿಗೆ ತಿಳಿಸಿರುತ್ತಾನೆ. ಇವೆರಡರಲ್ಲಿಯೂ ಕಾದಿ ವಿದ್ಯೆಗೇ ಹೆಚ್ಚು ಪ್ರಾಶಸ್ತ್ಯವನ್ನು ವಾಮಕೇಶ್ವರಾಂತರ್ಗತ ನಿತ್ಯಾಷೋಡಶಿಕಾರ್ಣವದಲ್ಲಿ ವಿಪುಲವಾಗಿ ಪ್ರತಿಪಾದಿಸಿರುತ್ತಾರೆ. ಈ ವಿದ್ಯೆಗೆ ಶ್ರೀ ವಿದ್ಯೆಯೆಂತಲೂ, ಪೂಜೆಗೆ ಸಾಧಾನವಾದ ಚಕ್ರಕ್ಕೆ ಶ್ರೀ ಚಕ್ರನೆಂತಲೂ ವ್ಯವಹಾರ.

ಅನೇಕ ಕ್ಷೇತ್ರಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಗೋಚರವಾಗುತ್ತ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುತ್ತಿರುವ ಸ್ತ್ರೀ ವಿಗ್ರಹಗಳೆಲ್ಲವೂ ಶ್ರೀ ಲಲಿತೆಯ ರೂಪಾಂತರಗಳಲ್ಲದೆ ಬೇರೆಯಲ್ಲ. ಶ್ರೀ ಲಲಿತೆಯು ರೂಪಾಂತರಗಳನ್ನು ತಾಳಿದಾಗ ಶ್ರೀ ಶಂಕರನೂ ಅದಕ್ಕೆ ಅನುಗುಣವಾದ ರೂಪವನ್ನು ಧರಿಸಿ ಆಕೆಯ ಪತಿಯಾಗುತ್ತಾನೆ.

ಲಲಿತಾ ಶಾರದಾ ಲಕ್ಷ್ಮೀಃ ಏಕೈವ ಭಗವತ್ಯುಮಾ।
ತತ್ತಲ್ಲಕ್ಷಣ ಸಂಯುಕ್ತಾ ಪುರುಷಾರ್ಥಪ್ರದಾ ನೃಣಾಂ ॥
ಯಾವಂತ್ಯ ಸ್ತಾ ಮಹಾಶಕ್ತ್ಯಃ ತಾವದ್ರೂಪಾಣಿ ಶಂಕರಃ
ಕೃತವಾನ್ ತಾಶ್ಚ ಭಜತೇ ಪತಿರೂಪೇಣ ಸರ್ವದಾ
ಉಮೈವ ಬಹುರೂಪೇಣ ಪತ್ನೀತ್ವೇನ ವ್ಯವಸ್ಥಿತಾ

ಎಂಬುದಾಗಿ ವರಾಹ ನರಸಿಂಹ ಪುರಾಣಗಳಲ್ಲಿ ವರ್ಣಿತವಾಗಿದೆ. ಮತ್ತು—

ಭೋಗೇ ಭವಾನೀ ಸಮರೇಚ ದುರ್ಗಾ
ಕೋಪೇಚ ಕಾಳೀ ಪುರುಷೇಷು ವಿಷ್ಣುಃ।
ಏಕೈವ ಶಕ್ತಿಃ ಪರಮೇಶ್ವರಸ್ಯ
ಭಿನ್ನಾ ಚತುರ್ಧಾ ವಿನಿಯೋಗಕಾಲೇ ॥

shrinidhi.udupa@gmail.com

ಪರಮೇಶ್ವರನ ಶಕ್ತಿಯು ಒಂದೇ ಆಗಿದ್ದರೂ ಭೋಗಕಾಲದಲ್ಲಿ ಭವಾನಿಯೆಂತಲೂ, ಯುದ್ಧಕಾಲದಲ್ಲಿ ದುರ್ಗೆಯೆಂತಲೂ, ಕೋಪದಲ್ಲಿ ಕಾಳಿಯೆಂತಲೂ ವ್ಯವಹಾರವನ್ನು ಪಡೆಯುತ್ತಾಳೆ. ಆಕೆಯ ಪುರುಷರೂಪವೇ ವಿಷ್ಣು–ವೆಂಬುದಾಗಿ ವಿನಿಯೋಗ ಸಮಯದಲ್ಲಿ ನಾಲ್ಕು ಬಗೆಯಾಗಿದ್ದಾಳೆ, ಇಂತಹ ಭಗವತಿಯನ್ನು ಸ್ತ್ರೀ ರೂಪದಿಂದಾಗಲಿ ಪುರುಷ ರೂಪದಿಂದಾಗಲಿ ಸಚ್ಚಿದಾನಂದ ಲಕ್ಷಣ ಲಕ್ಷಿತವಾದ ಪರಬ್ರಹ್ಮನೆಂದಾಗಲಿ ಧ್ಯಾನಮಾಡಬಹುದು.

ಮಮೈವ ಪೌರುಷಂ ರೂಪಂ ಗೋಪಿಕಾ ಜನ ಮೋಹನಂ ।

ಗೋಪಿಯರನ್ನು ಮರುಳು ಮಾಡಿರುವುದು ನನ್ನ ಪುರುಷ ರೂಪವೆಂಬುದಾಗಿ ಶ್ರೀ ದೇವಿಯೇ ಬ್ರಹ್ಮಾಂಡ ಪುರಾಣದಲ್ಲಿ ತಿಳಿಸಿರುತ್ತಾಳೆ.

ಕದಾಚಿಲ್ಲಲಿತಾ ದೇವೀ ಧೃತ ಶ್ರೀ ಕೃಷ್ಣ ವಿಗ್ರಹಾ ।
ವೇಣುಗಾನ ವಿನೋದೇನ ಮೋಹಯತ್ಯಖಿಲಂ ಜಗತ್ ॥

ಒಮ್ಮೊಮ್ಮೆ ಲಲಿತೆಯು ಶ್ರೀ ಕೃಷ್ಣನ ರೂಪವನ್ನು ಧರಿಸಿ, ವೇಣುಗಾನ ವಿನೋದದಿಂದ ಸಮಸ್ತ ಜಗತ್ತನ್ನೂ ಮೋಹಗೊಳಿಸುತ್ತಿದ್ದಾಳೆ.

ಒಂದು ಕಾಲದಲ್ಲಿ ಬೃಂದಾವನ ಮಾಹಾತ್ಮ್ಯವನ್ನು ತಿಳಿಯುವ ಉದ್ದೇಶದಿಂದ ಚತುರ್ಮುಖನು ನಾರದನೊಂದಿಗೆ ಗೋಲೋಕದಿಂದ ಹೊರಟು ವಿಷ್ಣುವಿನ ಸನ್ನಿಧಿಗೆ ಬಂದಾಗ ವಿಷ್ಣುವು ನಾರದನನ್ನು ಕುರಿತು;—

ಅಹಂಚ ವಾಸುದೇವಾಖ್ಯಃ ನಿತ್ಯಂ ಕಾಮಕಲಾತ್ಮಕಃ ।
ಅಹಂಚ ಲಲಿತಾ ದೇವೀ ಪುಂರೂಪಾ ಕೃಷ್ಣವಿಗ್ರಹಾ ॥
ಆವಯೋ ರಂತರಂ ನಾಸ್ತಿ ಸತ್ಯಂ ಸತ್ಯಂ ಹಿ ನಾರದ ।
ಇದಂ ಬೃಂದಾವನಂ ನಾಮ ರಹಸ್ಯಂ ಮಮ ವೈಗೃಹಂ ॥

ನಾರದ! ಕಾಮಕಲಾತ್ಮನಾದ ವಾಸುದೇವನೂ ನಾನೇ, ಪುರುಷರೂಪದಿಂದ ಶ್ರೀ ಕೃಷ್ಣನೆಂದು ಮೆರೆಯುವವನೂ ನಾನೇ. ನಮ್ಮಿಬ್ಬರಿಗೂ ಎಷ್ಟು ಮಾತ್ರವೂ

ಭೇದವಿಲ್ಲವೆಂಬುದು ಸತ್ಯ. ಬೃಂದಾವನವೆಂದು ಪ್ರಖ್ಯಾತಿ ಪಡೆದಿರುವ ಈ ಬೃಂದಾವನವು ನನ್ನ ರಹಸ್ಯ ಮಂದಿರ. ಎಂಬುದಾಗಿ ವಿಶದಪಡಿಸಿರುತ್ತಾನೆ.

ಒಮ್ಮೆ ಕೃಷ್ಣಾರ್ಜುನರು ಯಮುನಾತೀರದಲ್ಲಿ ವಿಹರಿಸುತ್ತಿರುವಾಗ ಅರ್ಜುನನು ಶ್ರೀ ಕೃಷ್ಣನ ನಿಜಸ್ವರೂಪವನ್ನು ಅರುಹಬೇಕೆಂದು ಪ್ರಾರ್ಥಿಸಿದ. ಕೃಷ್ಣನು ಅವನನ್ನು ಒಂದು ಗುಹೆಯ ಬಳಿ ಕರೆತಂದು ಒಳಕ್ಕೆ ಕಳುಹಿಸಿದ. ಅಲ್ಲೊಬ್ಬ ದಿವ್ಯ ಸುಂದರಿಯು ಇವನನ್ನು ಇದಿರ್ಗೊಂಡು ಅಲ್ಲಿಯ ಸರೋವರ ದಲ್ಲಿ ಸ್ನಾನ ಮಾಡಿಸಲು ಅರ್ಜುನನೂ ಸುಂದರೀರೂಪವನ್ನು ಧರಿಸಿದ. ಹೀಗೆ ಮುಂದೆ ಮುಂದೆ ನಡೆದು ಕಡೆಗೆ ತ್ರಿಪುರಸುಂದರಿಯ ಆಸ್ಥಾನವನ್ನು ಸೇರಿ, ಆಕೆಯನ್ನು ಬಹಳ ಕಾಲ ಸೇವಿಸುತ್ತಿದ್ದು, ತನ್ನ ಪೂರ್ವ ಸ್ಥಿತಿಯನ್ನೇ ಮರೆತು ಕೊನೆಗೆ ಯಮುನಾತೀರದಲ್ಲಿದ್ದ ಶ್ರೀ ಕೃಷ್ಣನ ಬಳಿ ಬಂದು ಮರಳಿ ತನ್ನ ಪೂರ್ವ ಸ್ಥಿತಿಯನ್ನು ಹೊಂದಿದುದರಿಂದ ಅತ್ಯಂತ ಖಿನ್ನನಾದನೆಂಬ ಮುಂತಾದ ಕಥೆಯು ಪದ್ಮಪುರಾಣದಲ್ಲಿ ವಿಪುಲವಾಗಿ ವರ್ಣಿತವಾಗಿದೆ.

ಒಟ್ಟಿನಲ್ಲಿ ಲಲಿತೆಗೂ ಕೃಷ್ಣನಿಗೂ ಭೇದವಿಲ್ಲ ಎಂಬ ಅಂಶವು ಸಿದ್ಧವಾ ಯಿತು. ಇದೇ ವಿಷಯದಲ್ಲಿ ಇನ್ನೂ ಅನೇಕ ಪ್ರಮಾಣಗಳಿರುವುದಾದರೂ ಗ್ರಂಥವು ಬೆಳೆಯಬಾರದೆಂಬ ಉದ್ದೇಶದಿಂದ ಇಲ್ಲಿಗೆ ನಿಲ್ಲಿಸಿ ಶ್ರೀ ಚಕ್ರಸ್ವರೂಪ ಮಹಿಮಾದಿಗಳನ್ನು ಕುರಿತು ಸ್ವಲ್ಪ ಮಟ್ಟಿಗಾದರೂ ತಿಳಿಸುವುದು ಮುಖ್ಯವೆಂದು ಭಾವಿಸಿ ಆ ವಿಷಯವನ್ನು ಮುಂದರಿಸುತ್ತಿದ್ದೇನೆ.

ಶ್ರೀ ಚಕ್ರದಲ್ಲಿ ನಾಲ್ಕು ಶಿವ ಚಕ್ರಗಳೂ, ಐದು ಶಕ್ತಿ ಚಕ್ರಗಳೂ ಅಡಕ ವಾಗಿವೆ. ಈ ಕಾರಣದಿಂದ ಶ್ರೀ ಚಕ್ರವನ್ನು ಪಾರ್ವತೀಪರಮೇಶ್ವರರ ರೂಪ ವೆಂದು ವ್ಯವಹಾರ. ತ್ರಿಕೋಣ, ಅಷ್ಟಕೋಣ, ದಶಕೋಣಗಳ ಎರಡು ಚಕ್ರ ಗಳು, ಚತುರ್ದಶಾರ—ಇವೈದು ಶಕ್ತಿಚಕ್ರಗಳು ಬಿಂದು, ಅಷ್ಟದಳ, ಷೋಡಶ ದಳ, ಚತುರಸ್ರ-ಈ ನಾಲ್ಕು ಶಿವಚಕ್ರಗಳು. ತ್ರಿಕೋಣದಲ್ಲಿ ಬಿಂದುವೂ, ಅಷ್ಟ ದಳದಲ್ಲಿ ಮತ್ತೊಂದು ಅಷ್ಟದಳವೂ, ದಶಾರಗಳಲ್ಲಿ ಷೋಡಶಾರವೂ, ಭೂಪುರ

ದಲ್ಲಿ ಭೂಗೃಹವೂ ಸೇರಿಕೊಂಡಿದೆ. ಇಂತು ಶಿವಶಕ್ತಿಗಳ ಪರಸ್ಪರವಾದ ಅವಿನಾಭಾವ ಸಂಬಂಧವನ್ನು ವಿವೇಕದಿಂದ ತಿಳಿದವನೇ ಶ್ರೀಚಕ್ರಸ್ವರೂಪವನ್ನು ಬಲ್ಲವನು. ತ್ರಿಕೋಣ ರೂಪಿಣಿಯೇ ಶಕ್ತಿ, ಬಿಂದುವೇ ಶಿವ. ಇಂತು ಬಿಂದು ತ್ರಿಕೋಣಗಳ ವಿಭಾಗವನ್ನು ಅರಿಯದೆ ಪೂಜಿಸತಕ್ಕವನಿಗೆ ಚಕ್ರ ಪೂಜೆಯ ಸಂಪೂರ್ಣ ಫಲವು ದೊರೆಯಲಾರದು. ಮತ್ತು ಇವನ ಪೂಜೆಯಿಂದ ಲಲಿತೆಯೂ ಸಂತೋಷಪಡುವುದಿಲ್ಲ. ಇಂತು ಚಕ್ರವಿಭಾಗವನ್ನು ಅವುಗಳ ಸ್ವರೂಪವನ್ನೂ ಚೆನ್ನಾಗಿ ತಿಳಿದ ಬಳಿಕ, ಚಕ್ರಕ್ಕೂ, ತನಗೂ ಮಂತ್ರಕ್ಕೂ ಐಕ್ಯವನ್ನು ಅನುಸಂಧಾನ ಮಾಡಿ ಪೂಜಿಸುವುದು ಶ್ರೇಯಸ್ಕರ. ಈ ವಿಷಯದಲ್ಲಿ ಮುಂದಿನ ಶ್ಲೋಕಗಳನ್ನು ಪ್ರಮಾಣವಾಗಿ ಕೊಡಲಾಗಿದೆ.

ಚತುರ್ಭಿಶ್ಶಿವ ಚಕ್ರೈಶ್ಚ ಶಕ್ತಿಚಕ್ರೈಶ್ಚ ಪಂಚಭಿಃ ।
ನವ ಚಕ್ರೈಶ್ಚ ಸಂಸಿದ್ಧಂ ಶ್ರೀ ಚಕ್ರಂ ಶಿವಯೋರ್ವಪುಃ ॥

ತ್ರಿಕೋಣಮಷ್ಟಕೋಣಂಚ ದಶಕೋಣ ದ್ವಯಂ ತಥಾ ।
ಚತುರ್ದಶಾರಂ ಚೈತಾನಿ ಶಕ್ತಿಚಕ್ರಾಣಿ ಪಂಚ ಚ ॥

ಬಿಂದುಶ್ಚಾಷ್ಟದಳಂ ಪದ್ಮಂ ತಥಾಷೋಡಶ ಪತ್ರಕಂ ।
ಚತುರಸ್ರಂ ಚತುರ್ದ್ವಾರಂ ಶಿವಚಕ್ರಾಣ್ಯನು ಕ್ರಮಾತ್ ॥

ತ್ರಿಕೋಣೇ ಬೈಂದವಂ ಶ್ಲಿಷ್ಟಂ ಅಷ್ಟಾರೇಷ್ಟ ದಳಾಂಬುಜಂ ।
ದಶಾರಯೋಷ್ಷೋಡಶಾರಂ ಭೂಗೃಹಂ ಭುವನಾಸ್ರ ಕೇ ।
ಶೈವಾನಾಮಪಿ ಶಾಕ್ತಾನಾಂ ಚಕ್ರಾಣಾಂ ಚ ಪರಸ್ಪರಂ ।
ಅವಿನಾಭಾವಸಂಬಂಧಂ ಯೋ ಜಾನಾತಿ ಸ ಚಕ್ರವಿತ್ ॥

ತ್ರಿಕೋಣ ರೂಪಿಣೀ ಶಕ್ತಿಃ ಬಿಂದುರೂಪಸ್ಸದಾಶಿವಃ ।
ಅವಿನಾಭಾವಸಂಬಂಧಂ ತಸ್ಮಾದ್ ಬಿಂದು ತ್ರಿಕೋಣಯೋಃ ॥

ಏವಂವಿಭಾಗಮಜ್ಞಾತ್ವಾ ಶ್ರೀಚಕ್ರಂ ಯಸ್ಸಮರ್ಚಯೇತ್ ।
ನತತ್ಫಲ ಮವಾಪ್ನೋತಿ ಲಲಿತಾವಾ ನತುಷ್ಯತಿ ॥

ಈ ಒಂಬತ್ತು ಚಕ್ರಗಳೂ ನಮ್ಮ ದೇಹದಲ್ಲಿಯೇ ಅಡಕವಾಗಿವೆ. ಎಂಬುದಕ್ಕೆ ಮುಂದಿನ ಶ್ಲೋಕವೇ ಪ್ರಮಾಣ.

ಬೈಂದವಂ ಬ್ರಹ್ಮರಂಧ್ರೇಚ ಮಸ್ತಕೇಚ ತ್ರಿಕೋಣಕಂ ।
ಲಲಾಟೇಷ್ವಾರ ಪತ್ರಂತು ಭ್ರುವೋರ್ಮಧ್ಯೇ ದಶಾರಕಂ ।
ಬಹಿರ್ದಶಾರಂ ಕಂಠೇತು ಮನ್ವಸ್ರಂ ಹೃದಿ ಭಾವಯೇತ್ ।
ನಾಭೌತು ವಸುಪತ್ರಂ ಚ ಕಟೌ ಷೋಡಶ ಪತ್ರಕಂ ।
ವೃತ್ತತ್ರಯಂ ತಥೋರ್ವೋಶ್ಚ ಪಾದಯೋಶ್ಚತು ರಸ್ರಕಂ ।
ಏವಂ ಕ್ರಮೇಣ ತದ್ ಧ್ಯಾಯೇತ್ ಶ್ರೀ ಚಕ್ರಂ ಶಿವಯೋರ್ವಪುಃ

ಈ ರೀತಿಯಿಂದ ಶ್ರೀ ಚಕ್ರಸ್ವರೂಪವನ್ನು ಅರಿತ ಕೆಲವರು ಅಂತರಂಗ ದಲ್ಲಿ ಭಗವತಿಯನ್ನು ಧ್ಯಾನ ಮಾಡಿ ಆ ಮೂಲಕ ಸ್ವಾತ್ಮಾರಾಮರಾಗುತ್ತಾರೆ, ಮತ್ತೆ ಕೆಲವು ಮಂದಿ ಐಹಿಕ ಭೋಗಾಪೇಕ್ಷೆಯಿಂದ ಸುವರ್ಣನಿಭವಾದ ೧ಳ ದಳ ಗಳುಳ್ಳ ಮೂಲಾಧಾರ ಚಕ್ರದಲ್ಲಿಯೂ ಮತ್ತು ಅದರ ಮೇಲ್ಭಾಗದಲ್ಲಿ ಹವಳ ಬಣ್ಣದ ಆರು ದಳಗಳಿಂದೊಪ್ಪುವ ಸ್ವಾಧಿಷ್ಠಾನ ಚಕ್ರದಲ್ಲಿಯೂ ದಶದಳಗಳಿಂದೊಪ್ಪುವ ಧೂಮ್ರ ವರ್ಣದ ಮಣಿಪೂರ ಚಕ್ರದಲ್ಲಿಯೂ ಉಪಾಸನೆ ಮಾಡತಕ್ಕವರು ನಿನ್ನ ಪತ್ತನದಿಂದ ಹೊರಭಾಗದಲ್ಲಿಯೇ ಇರುತ್ತಾರಲ್ಲದೆ ಅವರಿಗೆ ನಿನ್ನ ಸಾಮೀಪ್ಯವು ದುರ್ಲಭ. ಪಿಂಗಳ ವರ್ಣದ ದ್ವಾದಶ ದಳಾತ್ಮಕ ವಾದ ಅನಾಹತ ಚಕ್ರದಲ್ಲಿ ಧ್ಯಾನಮಾಡತಕ್ಕವರಿಗೆ ನಿನ್ನ ನಗರ ಪ್ರವೇಶವು ಲಭಿಸು ತ್ತದೆ. ಧೂಮ್ರ ವರ್ಣದ ಷೋಡಶದಳಾತ್ಮಕವಾದ ವಿಶುದ್ಧ ಚಕ್ರದಲ್ಲಿ ನಿನ್ನನ್ನು ಆರಾಧಿಸತಕ್ಕವರಿಗೆ ನಿನ್ನ ಸಾಮೀಪ್ಯವು ಲಭಿಸುತ್ತದೆ. ಸಹಸ್ರದಳಗಳಿಂದೊಪ್ಪುವ ಕರ್ಪೂರ ವರ್ಣದ ಆಜ್ಞಾ ಚಕ್ರದಲ್ಲಿ ಭಜಿಸತಕ್ಕವರು ನಿನಗೆ ಸಮಾನವಾದ ಭೋಗವನ್ನು ಅನುಭವಿಸುತ್ತಾರೆ. ಸಹಸ್ರಾರ ಪತ್ರದಲ್ಲಿ ನಿನ್ನನ್ನು ಅನುಸಂಧಾನ ಮಾಡತಕ್ಕ ಮಹಾಮಹಿಮರು ನಿನ್ನಲ್ಲಿ ಐಕ್ಯವನ್ನು ಪಡೆಯುತ್ತಾರೆ. ಇವೆಲ್ಲವೂ ಯೋಗಿಗಳಿಗೆ ಸಾಧ್ಯವಾದ ಮಾರ್ಗ. ಅರವತ್ತು ನಾಲ್ಕು ಉಪಚಾರಗಳಿಂದ ನಿನ್ನ ಬಹಿರಂಗ ಪೂಜೆಯನ್ನು ನಿಷ್ಕಾಮ ಬುದ್ಧಿಯಿಂದ ನೆರವೇರಿಸುವವರು ಐಹಿಕಾಮುಷ್ಮಿಕ ರೂಪವಾದ ದ್ವಿವಿಧ ಸೌಖ್ಯಕ್ಕೂ ಭಾಜನರಾಗುತ್ತಾರೆ. ಈ ವಿಧಾನವು ಮುಂದೆ ವಿಶದವಾಗಿ ನಿರೂಪಿತವಾಗಿದೆ.

ಶ್ರೀ ಲಲಿತೆಯನ್ನು ನಿಷ್ಕಾಮನಾಗಿ ಶಾಸ್ತ್ರಾನುಸಾರ ರೀತಿಯಲ್ಲಿ ಪೂಜಿಸಿ ಶ್ರೀ ವಿದ್ಯೆಯ (ಮಂತ್ರವ)ನ್ನು ಅನುಗಾಲವೂ ಜಪಮಾಡುವ ಮಹಾತ್ಮನ ಐಹಿ ಕಾಮುಷ್ಮಿಕಗಳನ್ನು ಆಕೆಯೇ ನಿರ್ವಹಿಸುವಳಲ್ಲದೆ ಎಳೆಗುರುವಿನ ಆಕಳಿನಂತೆ ವಾತ್ಸಲ್ಯದಿಂದ ಕಾಪಾಡುತ್ತಾಳೆ,

ಶ್ರೀ ಚಕ್ರ ಸಂದರ್ಶನದಿಂದ ಶತಕ್ರತುಗಳನ್ನು ಅನುಷ್ಠಿಸಿದ ಫಲವು ದೊರೆಯುತ್ತದೆ. ಷೋಡಶ ಮಹಾದಾನಗಳನ್ನು ಮಾಡಿ, ಜಗತ್ತಿನ ಸಕಲ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಿ, ಸಕಲ ತೀರ್ಥಗಳಲ್ಲಿಯೂ ಸ್ನಾನ ಮಾಡಿದ ಫಲವು ಲಭಿಸುವುದು. ಶ್ರೀ ಚಕ್ರವನ್ನು ಪೂಜಿಸತಕ್ಕವರು ದಿಟವಾಗಿಯೂ ಸಂಸಾರ ಪಾಶಕ್ಕೆ ಸಿಲುಕಲಾರರು. ಹೆಚ್ಚೇಕೆ ? ಶ್ರೀ ಚಕ್ರ ದರ್ಶನದಿಂದ ತೊಲಗುವಷ್ಟು ಪಾಪಕಾರ್ಯಗಳನ್ನು ಮನುಷ್ಯನು ಮಾಡಲಾರ.

ಯಸ್ಯನೋ ಪಶ್ಚಿಮಂ ಜನ್ಮ ಯದಿವಾ ಶಂಕರಃ ಸ್ವಯಂ ।
ತೇನೈವ ಲಭ್ಯತೇ ವಿದ್ಯಾ ಶ್ರೀಮತ್ಪಂ ಚದಶಾಕ್ಷರೀ ॥

ಯಾವನಿಗೆ ಮರಳಿ ಜನ್ಮವಿಲ್ಲವೋ, ಯಾವನಾದರೆ ಶ್ರೀ ಶಿವನ ಅಂಶವೋ ಅಂತಹವನಿಗೆ ಮಾತ್ರವೇ ಈ ವಿದ್ಯೆಯು ಲಭ್ಯವಾಗುತ್ತದೆ. ಈ ವಿದ್ಯೆಯು ಲಭಿಸಬೇಕಾದರೆ ಹಿಂದಿನ ಜನ್ಮದ ಸುಕೃತ ವಿಶೇಷದೊಂದಿಗೆ ಈ ಜನ್ಮದಲ್ಲಿ ತಾನು ಅದುವರೆಗೆ ಮಾಡಿದ ಇತರ ದೇವತಾ ಮಂತ್ರ ಜಪಾದಿಗಳೂ ಗಾಯತ್ರೀ ಪುರಶ್ಚರಣಾದಿಗಳೂ ಸಹಕಾರಿಗಳಾಗುತ್ತವೆ. ಇದಕ್ಕಿಂತಲೂ ಹೆಚ್ಚಿನ ವಿಷಯಗಳನ್ನು ಗುರುವಿನ ಮೂಲಕ ವಿಪುಲವಾಗಿ ತಿಳಿದುಕೊಳ್ಳತಕ್ಕದ್ದು.

ಪ್ಲವಂಗ ಸಂ. ಶ್ರಾವಣ ಶುಕ್ಲ ೭
ಸ್ಥಿರವಾರ
ಶಿವಗಂಗೆ.

ಇಂತು ವಿಜ್ಞಾಪಿಸುವ
ಉಮಾನಂದ
ಶ್ರೀ ವಿದ್ಯೋಪಾಸಕ ಚರಣರೇಣು.

ಶ್ರೀ ತ್ರಿಪುರ ಸುಂದರೀ ಪೂಜಾ ಕ್ರಮ

ಆಚಮನ-ಸಂಕಲ್ಪ-ಕಲಶ, ಶಂಖ, ಗಣಪತಿ, ಪೂಜಾನಂತರ, ತ್ರಿಪುರ ಸುಂದರೀ ನ್ಯಾಸವನ್ನು ಮಾಡಿದ ಬಳಿಕ, ಕಳಾನ್ಯಾಸವನ್ನು ಮಾಡಿದ ಮೇಲೆ ಇದಕ್ಕೆ ಸಂಬಂಧಪಟ್ಟ ಅಂಗನ್ಯಾಸ ಕರನ್ಯಾಸಗಳನ್ನೂ ಮಾಡಿ, ಧ್ಯಾನ ಶ್ಲೋಕವನ್ನು ಹೇಳಿ, ಪಂಚಪೂಜಾನಂತರ-ಶ್ರೀ ಚಕ್ರದ ನಾಲ್ಕು ದ್ವಾರಗಳಲ್ಲಿಯೂ ಕ್ರಮವಾಗಿ ಕಳೆಗಳನ್ನು ಆವಾಹನೆ ಮಾಡಬೇಕು. ಒಂದೊಂದು ಕಳೆಯನ್ನು ಆವಾಹನೆ ಮಾಡುವಾಗಲೂ ಬಿಂದುತ್ರಯ-ಮತ್ತು ಆ ಆ ಕಳೆಗೆ ಸಂಬಂಧಪಟ್ಟ ಮಾತೃಕಾ ವರ್ಣಸಹಿತವಾಗಿ ಧೂಮಾರ್ಚಿ, ಊಷ್ಮಾ, ಜ್ವಲಿನೀ, ಜ್ವಾಲಿನೀ, ವಿಸ್ಫುಲಿಂಗಿನೀ, ಸುಶ್ರೀ, ಸುರೂಪಾ, ಕಪಿಲಾ, ವಹ್ಯವಹಾ, ಕವ್ಯವಹಾ-ಎಂಬ ಹತ್ತು ಅಗ್ನಿ ಕಳೆಗಳನ್ನೂ ; ತಪಿನೀ, ತಾಪಿನೀ, ಧೂಮ್ರಾ, ಮರೀಚಿ, ಜ್ವಾಲಿನೀ, ರುಚಿ, ಸುಷುಮ್ನಾ, ಭೋಗದಾ, ವಿಶ್ವಾ, ಬೋಧಿನೀ, ಧಾರಿಣೀ, ಕ್ಷಮಾ-ಎಂಬ ಹನ್ನೆರಡು ಸೂರ್ಯ ಕಳೆಗಳನ್ನೂ ; ಅಮೃತಾ, ಮಾನದಾ, ಪೂಷಾ, ತುಷ್ಟಿ, ಪುಷ್ಟಿ, ರತಿ, ಧೃತಿ, ಶಶಿನೀ, ಚಂದ್ರಿಕಾ, ಕಾಂತಿ, ಜ್ಯೋತ್ಸ್ನಾ, ಶ್ರೀ, ಪ್ರೀತಿ, ಅಂಗದಾ, ಪೂರ್ಣಾ, ಪೂರ್ಣಾಮೃತಾ-ಎಂಬ ಹದಿನಾರು ಚಂದ್ರಕಳೆಗಳನ್ನೂ ; ಸೃಷ್ಟಿ, ಋದ್ಧಿ, ಸ್ಮೃತಿ, ಮೇಧಾ, ಕಾಂತಿ, ಲಕ್ಷ್ಮೀ, ಧೃತಿ, ಸ್ಥಿರಾ, ಸ್ಥಿತಿ, ಸಿದ್ಧಿ-ಎಂಬ ಹತ್ತು (ಸೃಷ್ಟಿ) ಬ್ರಹ್ಮ ಕಲೆಗಳನ್ನೂ ; ಜರಾ, ಪಾಲನೀ, ಶಾಂತಿ, ಈಶ್ವರೀ, ರತಿ, ಕಾಮಿಕಾ, ವರದಾ, ಹ್ಲಾದಿನೀ, ಪ್ರೀತಿ, ದೀರ್ಘಾ-ಎಂಬ ಹತ್ತು (ಸ್ಥಿತಿ) ವಿಷ್ಣು ಕಲೆಗಳನ್ನೂ ; ತೀಕ್ಷ್ಣಾ, ರೌದ್ರೀ, ಭಯಾ, ನಿದ್ರಾ, ತಂದ್ರಾ, ಕ್ಷುತ್, ಕ್ರೋಧಿನೀ, ಕ್ರಿಯಾ, ಉದ್ಗಾರೀ, ಮೃತ್ಯು-ಎಂಬ ಹತ್ತು (ಸಂಹಾರ) ರುದ್ರ ಕಲೆಗಳನ್ನೂ ; ಪೀತಾ, ಶ್ವೇತಾ, ಅರುಣಾ, ಅಸಿತಾ-ಎಂಬ ನಾಲ್ಕು ಈಶ್ವರ ಕಲೆಗಳನ್ನೂ ; ನಿವೃತ್ತಿ, ಪ್ರತಿಷ್ಠಾ, ವಿದ್ಯಾ, ಶಾಂತಿ, ಇಂಧಿಕಾ, ದೀಪಿಕಾ, ರೇಚಿಕಾ, ಮೋಚಿಕಾ, ಪರಾ, ಸೂಕ್ಷ್ಮಾ, ಸೂಕ್ಷ್ಮಾಮೃತಾ, ಜ್ಞಾನಾ, ಜ್ಞಾನಾಮೃತಾ, ಆಪ್ಯಾಯಿನೀ, ವ್ಯಾಪಿನೀ, ವ್ಯೋಮರೂಪಾ-ಎಂಬ ಹದಿನಾರು ಸದಾಶಿವ ಕಲೆಗಳನ್ನೂ ; ಎಲ್ಲವೂ ಕಲೆತು ಎಂಭತ್ತೆಂಟು ಕಲೆಗಳನ್ನೂ ಆವಾಹನೆ

ಮಾಡಿ, ಸಕಲ ದೇವತಾ ಸ್ವರೂಪಿಣಿಯೂ, ಸರ್ವಸೌಭಾಗ್ಯ ಸುಂದರಿಯೂ, ಸರ್ವತೀರ್ಥರೂಪಿಣಿಯೂ, ಸರ್ವಕಾಮ ಪ್ರಪೂರಿಣಿಯೂ ಸರ್ವಶಾಸ್ತ್ರಸ್ವರೂಪಿಣಿಯೂ. ವಿದ್ಯಾಮಯಿಯೂ. ಸಕಲಾಗಮ ನಮಸ್ಕೃತೆಯೂ. ಸರ್ವಾಮ್ನಾಯರೂಪಿಣಿಯೂ. ಸಕಲವೇದೋಪಶೋಭಿತೆಯೂ, ಸರ್ವಾನಂದಸ್ವರೂಪಿಣಿಯೂ, ಸಕಲಸಿದ್ಧಿಪ್ರದಾಯಿನಿಯೂ, ನಿತ್ಯೆಯೂ ಎನಿಸಿದ ಭಗವತಿಯನ್ನು ಹೃದಯ ಕಮಲದಲ್ಲಿ ಧ್ಯಾನಮಾಡಿ, ಹೃದಯ ಕಮಲದಲ್ಲಿ ಆಕೆಯ ದಿವ್ಯ ರೂಪವನ್ನು ಸ್ಮರಿಸಿ ಕೈಯಲ್ಲಿ ಪುಷ್ಪಾಕ್ಷತೆಗಳನ್ನು ಹಿಡಿದುಕೊಂಡು, "ಭಕ್ತರ ಸಲುವಾಗಿ ಕಾರಣಾನಂದ ವಿಗ್ರಹವನ್ನು ಧರಿಸಿ, ಸಕಲ ಭೂತ ಹಿತಕ್ಕಾಗಿ, ಮಹಾ ಪದ್ಮವನದ ನಡುವೆ ನೆಲೆಸಿರುವ ತಾಯೇ ! ಪರಮೇಶ್ವರಿ ! ಅಕ್ಕರೆಯಿಂದ ದಯೆಮಾಡು, ಭಕ್ತಿಸುಲಭೆಯೆನಿಸಿದ ದೇವೇಶಿ ! ನಿನ್ನನ್ನು ನಾನು ಅನನ್ಯ ಭಕ್ತಿಯಿಂದ ಪೂಜೆ ಮಾಡುತ್ತಿದ್ದೇನೆ–ಈ ಪೂಜೆಯು ಪರಿಪೂರ್ಣವಾಗುವವರೆಗೂ ನೀನು ಸುಸ್ಥಿರೆಯಾಗಿರು" ಎಂಬುದಾಗಿ ಪ್ರಾರ್ಥಿಸಿ ತನ್ನ ಹೃದಯ ಕಮಲದಲ್ಲಿ ನೆಲೆಸಿರುವ ದೇವಿಯನ್ನು ನಾಸಾ ಪುಟಗಳ ಮೂಲಕ ವಾಯುರೂಪದಿಂದ ಅಂಜಲಿಯಲ್ಲಿರುವ ಕುಸುಮಾಕ್ಷತೆಗಳಲ್ಲಿ ಪ್ರವೇಶಿಸಿದಂತೆ ಭಾವಿಸಿ ಕುಸುಮಾಂಜಲಿಯನ್ನು ಸಮರ್ಪಿಸಿ, ಛತ್ರ, ಚಾಮರ, ವ್ಯಜನ, ದರ್ಪಣಾದಿ ರಾಜೋಪಚಾರಗಳನ್ನು ಸಲ್ಲಿಸಿ, ಮುಂದೆ ಹೇಳುವ ರೀತಿಯಲ್ಲಿ ೬೪ ವಿಧವಾದ ಉಪಚಾರಗಳಿಂದ ಪೂಜಿಸಬೇಕು.

೬೪ ಉಪಚಾರಗಳು

ಈ ಮುಂದೆ ಹೇಳುವ ಒಂದೊಂದು ಉಪಚಾರದಲ್ಲಿಯೂ ಬೀಜಾಕ್ಷರ (ಬಿಂದುತ್ರಯ) ಗಳನ್ನೂ 'ಶ್ರೀ ಲಲಿತಾ ಮಹಾ ತ್ರಿಪುರಸುಂದರ್ಯೈನಮಃ' ಎಂಬುದನ್ನೂ ಹೇಳಿ ಪೂಜೆಯನ್ನು ನೆರವೇರಿಸಬೇಕು. ಆವಾಹನ, ಪಾದ್ಯ, ಅರ್ಘ್ಯ, ಆಚಮನೀಯ, ಮಧುಪರ್ಕ, ಆಭರಣಾವರೋಪಣ (ಮೈಮೇಲಿನ ಒಡವೆಗಳನ್ನು ತೆಗೆದಿಡುವಿಕೆ) ಸುಗಂಧ ತೈಲಾಭ್ಯಂಜನ, ಮಜ್ಜನಶಾಲಾಪ್ರವೇಶ,

ಮಜ್ಜನಮಂಟಪದಲ್ಲಿ ರತ್ನಪೀಠದ ಮೇಲೆ ಕುಳಿತುಕೊಳ್ಳುವಿಕೆ, ದಿವ್ಯಸ್ನಾನ (ಪಂಚಾಮೃತಾಭಿಷೇಕ) ಉಷ್ಣೋದಕ ಸ್ನಾನ, ಕನಕಕಲಶ ಸರ್ವತೀರ್ಥಾಭಿಷೇಕ, ಶ್ರೀ ರುದ್ರಾಧ್ಯಾಯ, ಶ್ರೀಸೂಕ್ತಮಂತ್ರಪಠನ, ಧೌತವಸ್ತ್ರ ಪರಿಮಾರ್ಜನ, ಅರುಣದುಕೂಲಪರಿಧಾನ, ಅರುಣದುಕೂಲೋತ್ತರೀಯ ಪರಿಧಾನ, ಆಲೇಪನಮಂಟಪ ಪ್ರವೇಶ, ಮಣಿಪೀಠೋಪವೇಶನ, ಕೇಶಭರಸ್ಯ ಕಾಲಾಗುರ್ವಾದಿ ಧೂಪ (ಮಿಂದ ಬಳಿಕ ತಲೆಗೂದಲನ್ನು ಒಣಗಿಸಿಕೊಳ್ಳಲು ಧೂಪ) ಚಂದನಾಗರು ಕೇಸರೀ, ಕಸ್ತೂರೀ, ಗೋರೋಚನಾದಿ ಸುಗಂಧ ದ್ರವ್ಯಗಳನ್ನು ಭಗವತಿಯ ದೇಹಕ್ಕೆ ಲೇಪನ, ತಲೆಮುಡಿಗೆ ಮಲ್ಲಿಗೆ ಕಲ್ಹಾರ, ಮಾಲತೀ, ಜಾಜಿ, ಸಂಪಿಗೆ, ಅಶೋಕ, ಪುನ್ನಾಗ, ಸೌಗಂಧಿಕಾ ಮುಂತಾದ ಎಲ್ಲಾ ಋತುಗಳಲ್ಲಿ ದೊರೆಯುವ ಹೂಗಳಿಂದ ರಚಿತವಾದ ಪೂಮಾಲೆಯನ್ನು ಮುಡಿಸುವಿಕೆ, ಭೂಷಣ ಮಂಟಪ ಪ್ರವೇಶ, ಮಣಿಪೀಠೋಪವೇಶನ, ನವರತ್ನ ಕಿರೀಟಧಾರಣ, ಕಿರೀಟದ ಮೇಲೆ ಚಂದ್ರರೇಖೆ, ಸಿಂಧೂರ ತಿಲಕ, ಕಣ್ಣಿಗೆ ಅಂಜನ, ಓಲೆ, ರತ್ನಕುಂಡಲ, ಮೂಗುತಿ, ಪಾಟಲಿ, ತುಟಿಗಳಿಗೆ ಅರಗಿನ ರಸ, ಮಾಂಗಲ್ಯ (ಆದ್ಯ, ಭೂಷಣ) ಕನಕಮಾಲೆ, ಪದಕ, ಮುತ್ತಿನಸರ, ಏಕಾವಳಿ, ಛನ್ನವೀರ (ತೋಡ) ನಾಲ್ಕು ಕೈಗಳಿಗೂ ತೋಳುಬಂದಿ, ಕೈಬಳೆಗಳು, ಉಂಗುರಗಳು, ನವರತ್ನಗಳ ಒಡ್ಯಾಣ, ಕಟಿಸೂತ್ರ, ಸೌಭಾಗ್ಯಾಭರಣ, ಕಾಲ್ಕಡಗ, ರತ್ನನೂಪುರ, ಕಾಲುಂಗುರ, ಎಡಮಗ್ಗಲಿನ ಮೇಲಣ ಕಯ್ಯಲ್ಲಿ ಹವಳದ ಪಾಶಾಯುಧ, ಬಲಭಾಗದ ಮೇಲ್ಕೈಯಲ್ಲಿ ಬೆಳ್ಳಿಯ ಅಂಕುಶ, ಎಡಭಾಗದ ಕೆಳಗಯ್ಯಲ್ಲಿ ಮನೋರೂಪವಾದ ಇಕ್ಷುಚಾಪ (ಕಬ್ಬಿನ ಜಲ್ಲೆ) ಬಲಭಾಗದ ಕೆಳಗಯ್ಯಲ್ಲಿ ಪಂಚತನ್ಮಾತ್ರ (ಶಬ್ದ ಸ್ಪರ್ಶ, ರೂಪ, ರಸ, ಗಂಧ) ಗಳೆಂಬ ಐದು ಬಾಣಗಳು, ಮಾಣಿಕ್ಯ ಮಣಿಪಾದುಕೆಗಳು. ಇಷ್ಟು ವಿಧವಾದ ಶೃಂಗಾರವೂ ಆದಮೇಲೆ ತನ್ನ ರಾಜಭೋಗಕ್ಕೆ ತಕ್ಕಂತಹ ವೇಷ, ಭೂಷಣ, ಗಾಂಭೀರ್ಯಾದಿ ಗುಣಗಣಗಳಿಂದೊಪ್ಪುವ ಆವರಣ ದೇವತೆಗಳೊಡನೆ ಶ್ರೀ ಚಕ್ರರೂಪ ಮಹಾಸಿಂಹಾಸನಾಧಿರೋಹಣ, ಅಲ್ಲಿ ತನ್ನ ಪ್ರಿಯ ಕಾಂತನಾದ ಕಾಮೇಶ್ವರನ ತೊಡೆಯಮೇಲೆ ಕುಳಿತುಕೊಳ್ಳುವಿಕೆ, ಅಮೃತಾಸವಚಷಕ, ಆಚಮನೀಯ,

ಕರ್ಪೂರ ಸುಗಂಧ ತಾಂಬೂಲ, ಆನಂದೋಲ್ಲಾಸದಿಂದ ಮಿನುಗುವ ಮುಖಭಾವ, ಸುವರ್ಣದಕ್ಷಿಣಾ, ನೀರಾಜನ, ಛತ್ರ, ಚಾಮರಯುಗಳ, ದರ್ಪಣ, ವ್ಯಜನ, ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯಾದಿಗಳನ್ನು ಸಮರ್ಪಿಸಿದ ಬಳಿಕ ಲಲಿತಾ ಸಹಸ್ರನಾಮ, ತ್ರಿಶತೀ, ಅಷ್ಟೋತ್ತರಾದಿಗಳಿಂದ ಪೂಜೆಮಾಡಿ, ಪುನಃ ಪ್ರಾಣಾಯಾಮ ಮಾಡಿ, ಸಂಕಲ್ಪಾನಂತರ "ಶ್ರೀ ಲಲಿತಾ ಮಹಾತ್ರಿಪುರ ಸುಂದರಿಯ ಪ್ರೀತ್ಯರ್ಥವಾಗಿ ಶ್ರೀ ಚಕ್ರನವಾವರಣಾರ್ಚನೆಯ ಅಂಗವಾಗಿ ಪೀಠಪೂಜಾದಿಗಳನ್ನು ಮಾಡುತ್ತೇನೆ" ಎಂಬುದಾಗಿ ಸಂಕಲ್ಪಮಾಡಿದ ಬಳಿಕ, ಆವರಣ ದೇವತಾ ಸಮುದಾಯವನ್ನೂ, ದಿವ್ಯ ಸಿದ್ಧಮಾನವ ಸಮುದಾಯವನ್ನೂ ವಟುಕ ಯೋಗಿನೀ ಕ್ಷೇತ್ರಪಾಲ ಗಣೇಶ ಮೊದಲಾದವರನ್ನೂ ಸಮಸ್ತಭೂತಗಳನ್ನೂ ಆತ್ಮದೇವತೆಗಳನ್ನೂ ಶ್ರೀ ಮಹಾ ತ್ರಿಪುರ ಸುಂದರಿಯನ್ನೂ ಮನಸಾ ಸ್ಮರಣೆ ಮಾಡಿ ನಮಸ್ಕರಿಸಿ, ಧೇನು ಮುದ್ರೆಯನ್ನು ತೋರಿಸಿ ಮೂಲಮಂತ್ರದಿಂದ ಪಾದಾದಿ ಬ್ರಹ್ಮರಂಧ್ರ ಪರ್ಯಂತವಾಗಿ ವ್ಯಾಪಕವನ್ನು ಮಾಡಿ ತನ್ನನ್ನು ಸಾಕ್ಷಾತ್ ಪರಶಿವನೆಂದು ಭಾವಿಸಬೇಕು.

ಒಂದು ಕ್ಷಣಕಾಲ ವಿಶ್ರಾಂತಿ ಪಡೆದು, ಚತುರಶ್ರ ಮಂಡಲದಲ್ಲಿ ಶಂಖವನ್ನು ಪೂಜಿಸಿ ಶಂಖದಲ್ಲಿರುವ ಉದಕವನ್ನು ಮೂಲಮಂತ್ರದಿಂದ ಅಭಿಮಂತ್ರಿಸಿ ಪೂಜಾಸಾಮಗ್ರಿಗಳನ್ನೂ ತನ್ನನ್ನೂ ಪ್ರೋಕ್ಷಣೆಮಾಡಿಕೊಂಡು ತ್ರಿತಾರೀಬೀಜಾಕ್ಷರ ಮಾತೃಕಾವರ್ಣ ಸಮೇತವಾಗಿ ಪೀಠಪೂಜೆಯನ್ನು ಮಾಡತಕ್ಕದ್ದು.

ಕಾಲಾಗ್ನಿರುದ್ರ, ಮಂಡೂಕ, ಆಧಾರಶಕ್ತಿ, ಕೂರ್ಮ, ವರಾಹ, ದಿಗ್ಗಜಗಳನ್ನೂ ಭೂದೇವಿಯನ್ನೂ ಪೂಜಿಸಿ ಪೂರ್ವ ಮೊದಲಾದ ಎಂಟು ದಿಕ್ಕುಗಳಲ್ಲಿಯೂ ಊರ್ಧ್ವಾಧೋದಿಕ್ಕುಗಳಲ್ಲಿಯೂ ಚಂದ್ರಿಕಾನ್ಯಾಸ ಮಾಡಬೇಕು.

ಭೂಮಿಯ ಅಧಿಪತಿಯೆನಿಸಿ ಐರಾವತವಾಹನಾರೂಢನೂ, ವಜ್ರಹಸ್ತನೂ, ತ್ರಿಪುರಸುಂದರೀ ಪರಿವಾರಕ್ಕೆ ಸೇರಿದವನೂ ಆದ ಇಂದ್ರನನ್ನು ಪೂಜಿಸುತ್ತೇನೆ–

sarvabhouma@gmail.com

ಆತನನ್ನು ಈ ತರ್ಪಣ ಮೂಲಕ ತೃಪ್ತಿಪಡಿಸುತ್ತೇನೆ. ಆತನಿಗೆ ಈ ನಮಸ್ಕಾರ ಎಂಬುದಾಗಿ ಹೇಳಿ, ಪೂಜಿಸಿ, ತರ್ಪಣಕೊಟ್ಟು ನಮಸ್ಕಾರ ಮಾಡಬೇಕು.

ತೇಜೋಧಿಪತಿಯೂ ಮೇಷವಾಹನಾರೂಢನೂ, ವ್ಯಜನಧಾರಿಯೂ ತ್ರಿಪುರ ಸುಂದರೀ ಪರಿವಾರಕ್ಕೆ ಸೇರಿದವನೂ ಆದ ಅಗ್ನಿಗೂ

ಪ್ರೇತಾಧಿಪತಿಯೂ ಮಹಿಷವಾಹನಾರೂಢನೂ, ದಂಡಹಸ್ತನೂ ತ್ರಿಪುರ ಸುಂದರೀ ಪರಿವಾರದವನೂ ಆದ ಯಮನಿಗೂ,

ರಕ್ಷೋಧಿಪತಿಯೂ ನರವಾಹನನೂ ಖಡ್ಗಹಸ್ತನೂ ತ್ರಿಪುರಸುಂದರೀ ಪರಿವಾರದವನೂ ಆದ ನಿರುರುತಿಗೂ,

ಜಲಾಧಿಪತಿಯೂ ಮಕರವಾಹನನೂ ಪಾಶಹಸ್ತನೂ ತ್ರಿಪುರ ಸುಂದರೀ ಪರಿವಾರದವನೂ ಆದ ವರುಣನಿಗೂ,

ಗಂಧರ್ವಾಧಿಪತಿಯೂ ಮೃಗವಾಹನನೂ ಧ್ವಜಧಾರಿಯೂ ತ್ರಿಪುರ ಸುಂದರೀ ಪರಿವಾರದ ವಾಯುವಿಗೂ,

ಯಕ್ಷಾಧಿಪತಿಯೂ ಅಶ್ವವಾಹನನೂ ಗದಾಂಕುಶಧಾರಿಯೂ ತ್ರಿಪುರ ಸುಂದರೀ ಪರಿವಾರದವನೂ ಆದ ಕುಬೇರನಿಗೂ,

ಪ್ರಮಥನಾಥನೂ ವೃಷಭವಾಹನನೂ ತ್ರಿಶೂಲಧಾರಿಯೂ ತ್ರಿಪುರ ಸುಂದರೀ ಪರಿವಾರಕ್ಕೆ ಸೇರಿದವನೂ ಆದ ಈಶಾನನಿಗೂ,

ಸತ್ಯಲೋಕಾಧಿಪತಿಯೂ ಹಂಸವಾಹನನೂ ಕಮಂಡಲು ಹಸ್ತನೂ ತ್ರಿಪುರ ಸುಂದರೀ ಪರಿವಾರದವನೂ ಆದ ಚತುರ್ಮುಖನಿಗೂ,

ಪಾತಾಳಲೋಕಾಧಿಪತಿಯೂ ಗರುಡವಾಹನನೂ ಚಕ್ರಧಾರಿಯೂ ತ್ರಿಪುರ ಸುಂದರೀ ಪರಿವಾರದವನೂ ಆದ ವಿಷ್ಣುವಿಗೂ, ಪೂಜಾ, ತರ್ಪಣ, ನಮಸ್ಕಾರಗಳನ್ನು ಸಲ್ಲಿಸಬೇಕು.

ಆ ಬಳಿಕ, ಅಮೃತಸಮುದ್ರ, ಅದರ ನಡುವೆ ರತ್ನದ್ವೀಪ, ಅಲ್ಲಿ ನಾನಾ ಬಗೆಯ ಮರಗಳಿಂದ ಕಂಗೊಳಿಸುವ ದೊಡ್ಡದೊಂದು ಉದ್ಯಾನ, ಆಮೇಲೆ ಸಂತಾನವೆಂಬ ಹೆಸರುಳ್ಳ ಕಲ್ಪವೃಕ್ಷವಾಟಿಕೆ, ಹರಿಚಂದನವೆಂಬ ಕಲ್ಪವೃಕ್ಷವಾಟಿಕೆ, ಮಂದಾರವೆಂಬ ಕಲ್ಪವೃಕ್ಷವಾಟಿಕೆ, ಪಾರಿಜಾತವೆಂಬ ಕಲ್ಪವೃಕ್ಷವಾಟಿಕೆ, ಕದಂಬ ವನವಾಟಿಕೆ, ಬಿಲ್ವವನವಾಟಿಕೆ, ಆಮುಂದೆ ಪುಷ್ಯರಾಗರತ್ನ ಪ್ರಾಕಾರ, ಪದ್ಮರಾಗ ರತ್ನಪ್ರಾಕಾರ, ವಜ್ರರತ್ನ ಪ್ರಾಕಾರ, ವೈಡೂರ್ಯರತ್ನ ಪ್ರಾಕಾರ, ಇಂದ್ರನೀಲರತ್ನ ಪ್ರಾಕಾರ, ಮೌಕ್ತಿಕರತ್ನ ಪ್ರಾಕಾರ, ಮರಕತರತ್ನ ಪ್ರಾಕಾರ, ವಿದ್ರುಮರತ್ನ ಪ್ರಾಕಾರ.ಮಾಣಿಕ್ಯರತ್ನ ಪ್ರಾಕಾರ, ನಾನಾರತ್ನ ಪ್ರಾಕಾರ, ಸಹಸ್ರಸ್ತಂಭ ಮಂಟಪ, ಅಮೃತವಾಟಿಕೆ, ಆನಂದವಾಟಿಕೆ, ವಿಮರ್ಶವಾಟಿಕೆ, ಬಾಲಾ ತಪೋದ್ಗಾರ (ಎಳಬಿಸಿಲ ಭೂಮಿ) ಚಂದ್ರಿಕಾ ತಪೋದ್ಗಾರ (ಬೆಳದಿಂಗಳಿನದು) ಮಹಾ ಶೃಂಗಾರಪರಿಘೆ, (ಅಂದವಾದ ಒಂದು ದೊಡ್ಡ ಕಂದಕ,) ಮಹಾ ಪದ್ಮಾಟವೀ, ಚಿಂತಾಮಣಿ ರತ್ನನಿರ್ಮಿತ ಗೃಹಪಂಕ್ತಿ, ಪೂರ್ವಾಮ್ನಾಯಮಯ ಪೂರ್ವದ್ವಾರ, ದಕ್ಷಿಣಾಮ್ನಾಯ ಮಯ ದಕ್ಷಿಣದ್ವಾರ, ಪಶ್ಚಿಮಾಮ್ನಾಯ ಮಯ ಪಶ್ಚಿಮ ದ್ವಾರ, ಉತ್ತರಾಮ್ನಾಯ ಮಯ ಉತ್ತರದ್ವಾರ, ಊರ್ಧ್ವಾಮ್ನಾಯ ಮಯ ಊರ್ಧ್ವದ್ವಾರ – ರತ್ನಪ್ರದೀಪಗಳ ವಲಯ, ಇವುಗಳ ನಡುವೆ ಪಂಚ-ಪ್ರೇತ ಸಿಂಹಾಸನ, ಸಿಂಹಾಸನದ ಆಗ್ನೇಯ ಭಾಗದಲ್ಲಿ ಬ್ರಹ್ಮನೇ ಒಂದು ಮಂಚದ ಕಾಲು, ನೈರ್ಋತ್ಯ ದಿಕ್ಕಿನಲ್ಲಿ ವಿಷ್ಣುವೂ, ವಾಯುವ್ಯದಲ್ಲಿ ರುದ್ರನೂ, ಈಶಾನ್ಯದಲ್ಲಿ ಈಶ್ವರನೂ ಮಂಚದ ಕಾಲುಗಳು. ಆ ಮಂಚಕ್ಕೆ ಸದಾಶಿವನೇ ಹಾಸುಹಲಿಗೆ-ಅದರಮೇಲೆ ಪ್ರೇತಾಂಬುಜಾಸನ, ಅದರ ಮೇಲೆ (ಕಿರುಮಂಚಿ) ಕೌಸುಂಭ ವರ್ಣದ ಹಾಸಿಗೆ, ದೊಡ್ಡದೊಂದು ಪರದೆ, ಮೇಲೆ ಅಂದವಾದ ಚಪ್ಪರ, ಕಬ್ಬಿನ ಜಲ್ಲೆಗಳ ಮಂಟಪ, ಅಲ್ಲಿ ತ್ರಿಪುರ ಸುಂದರಿಯು ಕೂಡುವ ಆಸನ, ತನ್ನ ಹೃದಯ ಕಮಲದ ನಡುವೆ ನಾನಾರತ್ನ ಖಚಿತವಾದ ಸ್ವರ್ಣಮಂಟಪದಲ್ಲಿ ಶ್ರೀಚಕ್ರವೆಂಬ ಕೆಂದಾವರೆಯ ಯೋಗಪೀಠವನ್ನು ಕಲ್ಪಿಸಿ, ತನಗೆ ಶ್ರೀವಿದ್ಯೆಯನ್ನು ಉಪದೇಶಿಸಿ ಅನುಗ್ರಹಿಸಿದ ಗುರುವಿಗೂ, ಶ್ರೀವಿದ್ಯಾಭಿಮಾನಿ ದೇವತೆಯಾದ ಶ್ರೀ ಲಲಿತಾ

shrinathudupa@gmail.com

ಮಹಾತ್ರಿಪುರ ಸುಂದರಿಗೂ, ಮಂತ್ರಕ್ಕೂ, ತನಗೂ ಐಕ್ಯವನ್ನು ಭಾವನೆಮಾಡಿ (ಕೈಯ್ಯಲ್ಲಿ ರತ್ನ ಪುಷ್ಪಾಂಜಲಿಯನ್ನು ಇಟ್ಟುಕೊಂಡು).

"ಮಹಾಪದ್ಮಾಟವೀ ಮಧ್ಯದಲ್ಲಿ ವಾಸಮಾಡುವಳೂ (ತಾನು ಸ್ವತಃ ರೂಪರಹಿತೆಯಾಗಿದ್ದರೂ ಭಕ್ತನ ಇಷ್ಟಾರ್ಥ ಸಿದ್ಧಿಗಾಗಿ) ಆನಂದಮಯವಾದ ದೇಹವನ್ನು ಧರಿಸಿರತಕ್ಕವಳೂ, ಎಲ್ಲ ಪ್ರಾಣಿಗಳಿಗೂ ಹಿತವನ್ನೇ ಬಯಸುವವಳೂ ಎನಿಸಿದ ತಾಯೇ! ಪರಮೇಶ್ವರಿ! ಬಿಜಮಾಡು–ಬಿಜಮಾಡು. ಪರಾಮೃತ ಪ್ರಿಯೇ! ನನ್ನ ಸಿದ್ಧಿಗಾಗಿ ಇಲ್ಲಿ ನಿನ್ನ ಸಾನ್ನಿಧ್ಯವನ್ನು ಅನುಗ್ರಹಿಸು. ಭಕ್ತರಿಗೆ ವರಗಳನ್ನು ಅನುಗ್ರಹಿಸುವವಳೂ ದೇವತೆಗಳಿಂದ ಪೂಜೆಯನ್ನು ಕೈಗೊಳ್ಳುವವಳೂ ಪರಾಮೃತ ಪ್ರಿಯೆಯೂ ಎನಿಸಿದ ತ್ರಿಪುರಾದೇವಿಯೇ! ಬಿಜಮಾಡಿಸು ನನ್ನ ಇಷ್ಟಾರ್ಥ ಸಿದ್ಧಿಗಾಗಿ ನಿನ್ನ ಸಾನ್ನಿಧ್ಯವನ್ನು ಅನುಗ್ರಹಿಸು, ಅರುಣವರ್ಣದ ದೇಹಕಾಂತಿಯಿಂದ ಬೆಳಗುವವಳೂ ನಾಲ್ಕು ಕೈಗಳಿಂದಲೂ ಬಾಣಬಿಲ್ಲು ಪಾಶಾಂಕುಶಗಳನ್ನು ಧರಿಸಿರತಕ್ಕವಳೂ ಕಾಮೇಶ್ವರನ ತೊಡೆಯಮೇಲೆ ಯುತ್ರಿತೆಯಾಗಿ ಸಂತೋಷದಿಂದ ಕುಳಿತಿರುವ ಶ್ರೀ ಲಲಿತೆಯನ್ನು ಭಜಿಸುತ್ತೇನೆ.

ಜ್ಞಾನಸ್ವರೂಪಿಣಿ! ಪರಾಮೃತ ಪ್ರಿಯೇ! ತ್ರಿಪುರೇ! ಮಹೇಶಾನಿ! ನಿನ್ನ ಪರಿವಾರವನ್ನು ಪೂಜಿಸಲು ನನಗೆ ಅನುಜ್ಞೆಯನ್ನು ದಯಪಾಲಿಸು ಪ್ರಕಟ ಮೊದಲಾದ ಯೋಗಿನೀಗಣವೂ ಮಹಾವೀರ ಪರಂಪರೆಯೂ ಶಿವನ ಅಪ್ಪಣೆಯ ಮೇರೆಗೆ ಇಲ್ಲಿ ತಮ್ಮ ಸಾನ್ನಿಧ್ಯವನ್ನು ಅನುಗ್ರಹಿಸಲಿ–ಎಂಬುದಾಗಿ ಪ್ರಾರ್ಥಿಸಿ ಅನುಮತಿಯನ್ನು ಪಡೆದು ಬೊಗಸೆಯಲ್ಲಿ ಪುಷ್ಪಾಕ್ಷತೆಗಳನ್ನು ಹಿಡಿದುಕೊಂಡು :

ಸಮಸ್ತ ಪ್ರಕಟ, ಗುಪ್ತ, ಗುಪ್ತತರ, ಸಂಪ್ರದಾಯ, ಕುಳ, ಕೌಳಿನೀ, ಗರ್ಭ, ರಹಸ್ಯಯೋಗಿನೀ, ಪ್ರಮುಖ ಸರ್ವಶಕ್ತಿಮಂಡಲ ಮಂಡಿತ ತ್ರೈಲೋಕ್ಯ ಮೋಹನ, ಸರ್ವಾಶಾಪರಿಪೂರಕ, ಸರ್ವಸಂಕ್ಷೋಭಣ, ಸರ್ವಸೌಭಾಗ್ಯದಾಯಕ, ಸರ್ವಾರ್ಥಸಾಧಕ, ಸರ್ವರಕ್ಷಾಕರ, ಸರ್ವರೋಗಹರ, ಸರ್ವಸಿದ್ಧಿಪ್ರದ, ಸರ್ವಾನಂದಮಯಗಳೆಂಬ ನವ ಚಕ್ರಗಳಿಗೂ ಅಧೀಶ್ವರಿಯೆನಿಸಿ, ತ್ರಿಪುರಾ,

ತ್ರಿಪುರೋಶಿ ತ್ರಿಪುರ ಸುಂದರೀ, ತ್ರಿಪುರವಾಸಿನೀ, ತ್ರಿಪುರಶ್ರೀ, ತ್ರಿಪುರಮಾಲಿನೀ, ತ್ರಿಪುರಾಸಿದ್ಧಾ, ತ್ರಿಪುರಾಂಬಾ, ತ್ರಿಪುರಭೈರವೀಯೆಂದು ಪ್ರಸಿದ್ಧಿ ಪಡೆದು ಶ್ರಿ ಲಲಿತಾ ಭಟ್ಟಾರಿಕಾ ಎಂಬ ವ್ಯವಹಾರದಿಂದ ಮೆರೆಯುವ ಸಚ್ಚಿದಾನಂದ ಪ್ರತ್ಯಗಾತ್ಮ ಸ್ವರೂಪಿಣಿಯೂ, ಇಚ್ಛಾ ಜ್ಞಾನ ಕ್ರಿಯಾ ಸ್ವತಂತ್ರಿಣಿಯೂ ಶ್ರೀಗುರುಮೂರ್ತಿ ರೂಪಿಣಿಯೂ ಆಗಿರುವ ಶ್ರೀಚಕ್ರಾಭಿಮಾನಿ ದೇವತೆಗೆ ನಮಸ್ಕಾರ.

ಎಂದು ಹೇಳಿ ಪುಷ್ಪಾಂಜಲಿಯನ್ನು ಸಮರ್ಪಿಸಿ, ಶ್ರೀ ಚಕ್ರದ ಪಶ್ಚಿಮ ದಿಕ್ಕಿನಿಂದ ಮೊದಲುಮಾಡಿ ಪ್ರದಕ್ಷಿಣಾಕಾರವಾಗಿ ಪೂಜಿಸಬೇಕು.

ಶ್ರೀ ಚಕ್ರದ ಕೋಣಗಳನ್ನು ಪೂಜಿಸುವ ವಿಧಾನ—

ಪ್ರಥಮಾವರಣ ಪೂಜೆ:

ತ್ರೈಲೋಕ್ಯಮೋಹನ ಚಕ್ರಕ್ಕೆ ಕೈಮುಗಿದು, ಬೀಜಾಕ್ಷರಗಳಿಂದ ಒಂದೊಂದು ಸಲವೂ ಪೂಜೆಮಾಡಿ, ತರ್ಪಣಕೊಟ್ಟು ನಮಸ್ಕರಿಸಬೇಕು. ಒಂಭತ್ತು ಆವರಣ ಗಳಲ್ಲಿಯೂ ಇದೇಕ್ರಮ.

- ಅಣಿಮಾ ಸಿದ್ಧಿ ಶ್ರೀಪಾದುಕಾಂ ಪೂಜಯಾಮಿ ತರ್ಪಯಾಮಿ ನಮಃ
- ಲಘಿಮಾ ಸಿದ್ಧಿ ಶ್ರೀಪಾದುಕಾಂ ,, ನಮಃ
- ಮಹಿಮಾ ಸಿದ್ಧಿ ಶ್ರೀಪಾದುಕಾಂ ,, ನಮಃ
- ಈಶಿತ್ವ ಸಿದ್ಧಿ ಶ್ರೀಪಾದುಕಾಂ ,, ನಮಃ
- ವಶಿತ್ವ ಸಿದ್ಧಿ ಶ್ರೀಪಾದುಕಾಂ ,, ನಮಃ
- ಪ್ರಾಕಾಮ್ಯ ಸಿದ್ಧಿ ಶ್ರೀ ಪಾದುಕಾಂ ,, ನಮಃ
- ಭುಕ್ತಿ ಸಿದ್ಧಿ ಶ್ರೀ ಪಾದುಕಾಂ ,, ನಮಃ
- ಇಚ್ಛಾ ಸಿದ್ಧಿ ಶ್ರೀ ಪಾದುಕಾಂ ,, ನಮಃ

- ಪ್ರಾಪ್ತಿಸಿದ್ಧಿ ಶ್ರೀ ಪಾದುಕಾಂ ಪೂಜಯಾಮಿ ತರ್ಪಯಾಮಿ ನಮಃ
- ಸರ್ವಕಾಮಸಿದ್ಧಿ ಶ್ರೀ ಪಾದುಕಾಂ ,, ನಮಃ
- ಬ್ರಾಹ್ಮೀ ಮಾತೃಕಾದೇವೀ ಶ್ರೀ ಪಾದುಕಾಂ ,, ನಮಃ
- ಮಾಹೇಶ್ವರೀ ಮಾತೃಕಾದೇವೀ ಶ್ರೀ ಪಾದುಕಾಂ ,, ನಮಃ
- ಕೌಮಾರೀ ಮಾತೃಕಾದೇವೀ ಶ್ರೀ ಪಾದುಕಾಂ ,, ನಮಃ
- ವೈಷ್ಣವೀ ಮಾತೃಕಾದೇವೀ ಶ್ರೀ ಪಾದುಕಾಂ ,, ನಮಃ
- ವಾರಾಹೀ ಮಾತೃಕಾದೇವೀ ಶ್ರೀ ಪಾದುಕಾಂ ,, ನಮಃ
- ಮಾಹೇಂದ್ರೀ ಮಾತೃಕಾದೇವೀ ಶ್ರೀ ಪಾದುಕಾಂ ,, ನಮಃ
- ಚಾಮುಂಡಾ ಮಾತೃಕಾದೇವೀ ಶ್ರೀ ಪಾದುಕಾಂ ,, ನಮಃ
- ಮಹಾಲಕ್ಷ್ಮೀ ಮಾತೃಕಾದೇವೀ ಶ್ರೀ ಪಾದುಕಾಂ ,, ನಮಃ
- ಸರ್ವಸಂಕ್ಷೋಭಿಣೀ ಮುದ್ರಾಶಕ್ತಿ ಶ್ರೀ ಪಾದುಕಾಂ ,, ನಮಃ
- ಸರ್ವವಿದ್ರಾವಿಣೀ ಮುದ್ರಾಶಕ್ತಿ ಶ್ರೀ ಪಾದುಕಾಂ ,, ನಮಃ
- ಸರ್ವಾಕರ್ಷಿಣೀ ಮುದ್ರಾಶಕ್ತಿ ಶ್ರೀ ಪಾದುಕಾಂ ,, ನಮಃ
- ಸರ್ವವಶಂಕರೀ ಮುದ್ರಾಶಕ್ತಿ ಶ್ರೀ ಪಾದುಕಾಂ ,, ನಮಃ
- ಸರ್ವೋನ್ಮಾದಿನೀ ಮುದ್ರಾಶಕ್ತಿ ಶ್ರೀ ಪಾದುಕಾಂ ,, ನಮಃ
- ಸರ್ವಮಹಾಂಕುಶಾ ಮುದ್ರಾಶಕ್ತಿ ಶ್ರೀ ಪಾದುಕಾಂ ,, ನಮಃ
- ಸರ್ವಖೇಚರೀ ಮುದ್ರಾಶಕ್ತಿ ಶ್ರೀ ಪಾದುಕಾಂ ,, ನಮಃ
- ಸರ್ವಬೀಜ ಮುದ್ರಾಶಕ್ತಿ ಶ್ರೀ ಪಾದುಕಾಂ ,, ನಮಃ
- ಸರ್ವಯೋನಿ ಮುದ್ರಾಶಕ್ತಿ ಶ್ರೀ ಪಾದುಕಾಂ ,, ನಮಃ
- ಸರ್ವತ್ರಿಖಂಡ ಮುದ್ರಾಶಕ್ತಿ ಶ್ರೀ ಪಾದುಕಾಂ ,, ನಮಃ

ಎಂದು ಪೂಜಿಸಿ, ಇಂತು ತ್ರೈಲೋಕ್ಯಮೋಹನ ಚಕ್ರದಲ್ಲಿ ನೆಲೆಸಿರುವ ಅಣಿಮಾದಿ ಪ್ರಕಟಯೋಗಿನಿಯರು ತಂತಮ್ಮ ಮುದ್ರಾ, ಸಿದ್ಧಿ, ಆಯುಧ, ವಾಹನ, ಪರಿವಾರಾಲಂಕಾರ ಸಹಿತೆಯರಾಗಿ ಸರ್ವೋಪಚಾರಯುಕ್ತವಾದ ಈ ಪೂಜೆಯನ್ನು ಸ್ವೀಕರಿಸಿ, ಸಂತೃಪ್ತೆಯರಾಗಲಿ-ಅವರೆಲ್ಲರಿಗೂ ನಮಸ್ಕಾರ—ಎಂಬುದಾಗಿ ಪುಷ್ಪಾ

shrimathimalupa@gmail.com

ಕ್ಷತೆಗಳಿಂದ ಅರ್ಘ್ಯವನ್ನು ಕೊಟ್ಟು, ಭಗವತಿಯನ್ನು ಶೃಂಗಾರರಸ ಸ್ವರೂಪಿಣಿಯೆಂದು ಭಾವಿಸಬೇಕು. ಬಿಂದುತ್ರಯದಿಂದ ಭಗವತಿಗೆ ಮೂರುಸಲ ತರ್ಪಣ ಕೊಟ್ಟು ಶರಣಾಗತ ವತ್ಸಲೆ! ದೇವಿ! ಮೊದಲನೆಯ ಆವರಣಾರ್ಚನೆಯನ್ನು ಭಕ್ತಿಪುರಸ್ಸರವಾಗಿ ನಿನಗೆ ಅರ್ಪಣೆ ಮಾಡಿದ್ದೇನೆ. ನನಗೆ ಇಷ್ಟಾರ್ಥಸಿದ್ಧಿಯನ್ನು ಅನುಗ್ರಹಿಸು-ಎಂದು ಪ್ರಾರ್ಥಿಸಿ ಮೂಲಮಂತ್ರದಿಂದ ಗುರುವನ್ನು ಶಿರಸ್ಸಿನ ಮೇಲೆ ಪುಷ್ಪಾಕ್ಷತೆಗಳಿಂದ ಪೂಜಿಸಬೇಕು.

೨ನೆಯ ಆವರಣ

ಸರ್ವಾಶಾಪರಿಪೂರಕ ಚಕ್ರಕ್ಕೆ ಕೈಮುಗಿದು

ಕಾಮಾಕರ್ಷಿಣೀ ನಿತ್ಯಾಕಳಾ ಶ್ರೀ ಪಾದುಕಾಂ ಪೂಜಯಾಮಿ ತರ್ಪಯಾಮಿ ನಮಃ
ಬುದ್ಧ್ಯಾಕರ್ಷಿಣೀ ನಿತ್ಯಾಕಳಾ ಶ್ರೀ ಪಾದುಕಾಂ ,, ನಮಃ
ಅಹಂಕಾರಾತರ್ಷಿಣೀ ನಿತ್ಯಾಕಳಾ ಶ್ರೀ ಪಾದುಕಾಂ ,, ನಮಃ
ಶಬ್ದಾತರ್ಷಿಣೀ ನಿತ್ಯಾಕಳಾ ಶ್ರೀ ಪಾದುಕಾಂ ,, ನಮಃ
ಸ್ಪರ್ಶಾಕರ್ಷಿಣೀ ನಿತ್ಯಾಕಳಾ ಶ್ರೀ ಪಾದುಕಾಂ ,, ನಮಃ
ರೂಪಾಕರ್ಷಿಣೀ ನಿತ್ಯಾಕಳಾ ಶ್ರೀ ಪಾದುಕಾಂ ,, ನಮಃ
ರಸಾಕರ್ಷಿಣೀ ನಿತ್ಯಾಕಳಾ ಶ್ರೀ ಪಾದುಕಾಂ ,, ನಮಃ
ಗಂಧಾಕರ್ಷಿಣೀ ನಿತ್ಯಾಕಳಾ ಶ್ರೀ ಪಾದುಕಾಂ ,, ನಮಃ
ಚಿತ್ತಾಕರ್ಷಿಣೀ ನಿತ್ಯಾಕಳಾ ಶ್ರೀ ಪಾದುಕಾಂ ,, ನಮಃ
ಧೈರ್ಯಾಕರ್ಷಿಣೀ ನಿತ್ಯಾಕಳಾ ಶ್ರೀ ಪಾದುಕಾಂ ,, ನಮಃ
ಸ್ಮೃತ್ಯಾಕರ್ಷಿಣೀ ನಿತ್ಯಾಕಳಾ ಶ್ರೀ ಪಾದುಕಾಂ ,, ನಮಃ
ನಾಮಾಕರ್ಷಿಣೀ ನಿತ್ಯಾಕಳಾ ಶ್ರೀ ಪಾದುಕಾಂ ,, ನಮಃ
ಬೀಜಾಕರ್ಷಿಣೀ ನಿತ್ಯಾಕಳಾ ಶ್ರೀ ಪಾದುಕಾಂ ,, ನಮಃ
ಆತ್ಮಾಕರ್ಷಿಣೀ ನಿತ್ಯಾಕಳಾ ಶ್ರೀ ಪಾದುಕಾಂ ,, ನಮಃ

❋ ಅಮೃತಾಕರ್ಷಿಣೀ ನಿತ್ಯಾಕಳಾ ಶ್ರೀ ಪಾದುಕಾಂ ಪೂಜಯಾಮಿ

ತರ್ಪಯಾಮಿ ನಮಃ

❋ ಶರೀರಾಕರ್ಷಿಣೀ ನಿತ್ಯಾಕಳಾ ಶ್ರೀ ಪಾದುಕಾಂ ,, ನಮಃ

❋ ತ್ರಿಪುರೇಶೀ ಶ್ರೀ ಪಾದುಕಾಂ ,, ನಮಃ

❋ ಶ್ರೀ ಮಹಾರಾಜ್ಞೀ ಶ್ರೀ ಪಾದುಕಾಂ ,, ನಮಃ

ಪೂಜಿಸಿ, ಸರ್ವವಿದ್ರಾವಿಣೀ ಮುದ್ರೆಯನ್ನು ತೋರಿಸಿ, ಸರ್ವಾಶಾಪರಿಪೂರಕ ಚಕ್ರದಲ್ಲಿ ನೆಲೆಸಿರುವ ಕಾಮಾಕರ್ಷಿಣೀ ಮೊದಲಾದ ಗುಪ್ತಯೋಗಿನಿಯರು ತಾತಮ್ಮ ಮುದ್ರಾ, ಸಿದ್ಧಿ. ಆಯುಧ, ವಾಹನ, ಪರಿವಾರಾಲಂಕಾರ ಸಹಿತೆಯರಾಗಿ, ಸರ್ವೋಪಚಾರಯುಕ್ತವಾದ ಈ ಪೂಜೆಯನ್ನು ಸ್ವೀಕರಿಸಿ ಸಂತೃಪ್ತೆಯರಾಗಲಿ, ಅವರೆಲ್ಲರಿಗೂ ನಮಸ್ಕಾರ-ಎಂಬುದಾಗಿ ಪುಷ್ಪಾಕ್ಷತೆಗಳಿಂದ ಅರ್ಘ್ಯವನ್ನು ಕೊಟ್ಟು ಭಗವತಿಯನ್ನು ವೀರರಸಾತ್ಮಿಕೆಯೆಂದು ಧ್ಯಾನಮಾಡಬೇಕು, ಬಿಂದು ತ್ರಯದಿಂದ ದೇವಿಗೆ ಮೂರುಸಲ ತರ್ಪಣಕೊಟ್ಟು,

"ಶರಣಾಗತ ವತ್ಸಲೆ ! ದೇವೀ ! ಎರಡನೆಯ ಆವರಣಾರ್ಚನೆಯನ್ನು ಭಕ್ತಿಪುರಸ್ಸರವಾಗಿ ನಿನಗೆ ಅರ್ಪಣ ಮಾಡಿದ್ದೇನೆ. ನನಗೆ ಇಷ್ಟಾರ್ಥಸಿದ್ಧಿಯನ್ನು ಅನುಗ್ರಹಿಸು".

ಎಂದು ಪ್ರಾರ್ಥಿಸಿ ಮೂಲಮಂತ್ರದಿಂದ ಗುರುವನ್ನು ಶಿರಸ್ಸಿನ ಮೇಲೆ ಪುಷ್ಪಾಕ್ಷತೆಗಳಿಂದ ಪೂಜಿಸಬೇಕು.

೩ನೆಯ ಆವರಣ

ಸರ್ವಸಂಕ್ಷೋಭಣ ಚಕ್ರಕ್ಕೆ ಕೈಮುಗಿದು

❋ ಅನಂಗ ಕುಸುಮಾದೇವೀ ಶ್ರೀ ಪಾದುಕಾಂ ಪೂಜಯಾಮಿ

ತರ್ಪಯಾಮಿ ನಮಃ

❋ ಅನಂಗ ಮೇಖಲಾದೇವೀ ಶ್ರೀ ಪಾದುಕಾಂ ,, ನಮಃ

❋ ಅನಂಗ ಮದನಾದೇವೀ ಶ್ರೀ ಪಾದುಕಾಂ ,, ನಮಃ

ಅನಂಗ ಮದನಾತುರಾದೇವೀ ಶ್ರೀ ಪಾದುಕಾಂ ಪೂಜಯಾಮಿ
ತರ್ಪಯಾಮಿ ನಮಃ
ಅನಂಗ ರೇಖಾದೇವೀ ಶ್ರೀ ಪಾದುಕಾಂ ,, ನಮಃ
ಅನಂಗ ವೇಗಿನೀದೇವೀ ಶ್ರೀ ಪಾದುಕಾಂ ,, ನಮಃ
ಅನಂಗಾಂಕುಶಾದೇವೀ ಶ್ರೀ ಪಾದುಕಾಂ ,, ನಮಃ
ಅನಂಗ ಮಾಲಿನೀದೇವೀ ಶ್ರೀ ಪಾದುಕಾಂ ,, ನಮಃ
ತ್ರಿಪುರಾ ಸುಂದರೀ ಚಕ್ರೇಶ್ವರೀ ಶ್ರೀ ಪಾದುಕಾಂ ,, ನಮಃ
ಮಹಾ ಮಹಾಶಕ್ತಿಂ ಶ್ರೀ ಪಾದುಕಾಂ ,, ನಮಃ

ಎಂದು ಪೂಜಿಸಿ, ಸರ್ವಾಕರ್ಷಣ ಮುದ್ರೆಯನ್ನು ತೋರಿ, ಸರ್ವಸಂಕ್ಷೋಭಣ ಚಕ್ರದಲ್ಲಿ ನೆಲೆಸಿರುವ ಅನಂಗಕುಸುಮೆ ಮೊದಲಾದ ಗುಪ್ತತರ ಯೋಗಿನಿಯರು ತಂತಮ್ಮ ಮುದ್ರಾ, ಸಿದ್ಧಿ, ಆಯುಧ, ವಾಹನ, ಪರಿವಾರಾಲಂಕಾರ ಸಹಿತೆಯರಾಗಿ ಸರ್ವೋಪಚಾರ ಯುಕ್ತವಾದ ಈ ಪೂಜೆಯನ್ನು ಸ್ವೀಕರಿಸಿ ಸಂತೃಪ್ತೆಯರಾಗಲಿ, ಅವರೆಲ್ಲರಿಗೂ ನಮಸ್ಕಾರ–ಎಂಬುದಾಗಿ ಪುಷ್ಪಾಕ್ಷತೆಗಳಿಂದ ಅರ್ಘ್ಯವನ್ನು ಕೊಟ್ಟು ದೇವಿಯನ್ನು ಕರುಣ ರಸಾತ್ಮಿಕೆಯೆಂದು ಭಾವಿಸಿ, ಶರಣಾಗತ ವತ್ಸಲೆ! ದೇವಿ! ಮೂರನೆಯ ಆವರಣಾರ್ಚನೆಯನ್ನು ಭಕ್ತಿ–ಪುರಸ್ಸರವಾಗಿ ನಿನಗೆ ಅರ್ಪಣ ಮಾಡಿದ್ದೇನೆ. ನನ್ನ ಇಷ್ಟಾರ್ಥ ಸಿದ್ಧಿಯನ್ನು ಅನುಗ್ರಹಿಸು– ಎಂದು ಪ್ರಾರ್ಥಿಸಿ, ಮೂಲಮಂತ್ರದಿಂದ ಗುರುವನ್ನು ಶಿರಸ್ಸಿನ ಮೇಲೆ ಪುಷ್ಪಾಕ್ಷತೆಗಳಿಂದ ಪೂಜಿಸಬೇಕು.

೪ನೆಯ ಆವರಣ

ಸರ್ವಸೌಭಾಗ್ಯದಾಯಕ ಚಕ್ರಕ್ಕೆ ಕೈಮುಗಿದು

ಸರ್ವಸಂಕ್ಷೋಭಿಣೀಶಕ್ತಿ ಶ್ರೀ ಪಾದುಕಾಂ ಪೂಜಯಾಮಿ
ತರ್ಪಯಾಮಿ ನಮಃ
ಸರ್ವವಿದ್ರಾವಿಣೀ ಶಕ್ತಿ ಶ್ರೀ ಪಾದುಕಾಂ ,, ನಮಃ
ಸರ್ವಾಕರ್ಷಿಣೀ ಶಕ್ತಿ ಶ್ರೀ ಪಾದುಕಾಂ ,, ನಮಃ

- ಸರ್ವಾಹ್ಲಾದಿನೀಶಕ್ತಿ ಶ್ರೀಪಾದುಕಾಂ ಪೂಜಯಾಮಿ ತರ್ಪಯಾಮಿ ನಮಃ
- ಸರ್ವಸಂಮೋಹಿನೀ ಶಕ್ತಿ ಶ್ರೀ ಪಾದುಕಾಂ ,, ನಮಃ
- ಸರ್ವಸ್ತಂಭಿನೀ ಶಕ್ತಿ ಶ್ರೀ ಪಾದುಕಾಂ ,, ನಮಃ
- ಸರ್ವಜೃಂಭಿಣೀ ಶಕ್ತಿ ಶ್ರೀ ಪಾದುಕಾಂ ,, ನಮಃ
- ಸರ್ವವಶಂಕರೀ ಶಕ್ತಿ ಶ್ರೀ ಪಾದುಕಾಂ ,, ನಮಃ
- ಸರ್ವರಂಜಿನೀ ಶಕ್ತಿ ಶ್ರೀ ಪಾದುಕಾಂ ,, ನಮಃ
- ಸರ್ವೋನ್ಮಾದಿನೀ ಶಕ್ತಿ ಶ್ರೀ ಪಾದುಕಾಂ ,, ನಮಃ
- ಸರ್ವಾರ್ಥಸಾಧಿನೀ ಶಕ್ತಿ ಶ್ರೀ ಪಾದುಕಾಂ ,, ನಮಃ
- ಸರ್ವಸಂಪತ್ತಿಪೂರಿಣೀ ಶಕ್ತಿ ಶ್ರೀ ಪಾದುಕಾಂ ,, ನಮಃ
- ಸರ್ವಮಂತ್ರಮಯಾಶಕ್ತಿ ಶ್ರೀ ಪಾದುಕಾಂ ,, ನಮಃ
- ಸರ್ವದ್ವಂದ್ವಕ್ಷಯಕರೀಶಕ್ತಿ ಶ್ರೀ ಪಾದುಕಾಂ ,, ನಮಃ
- ಮಹಾ ಮಹಾಗುಪ್ತಾ ಶ್ರೀ ಪಾದಂಕಾಂ ,, ನಮಃ
- ತ್ರಿಪುರವಾಸಿನೀ ಚಕ್ರೇಶ್ವರೀ ಶ್ರೀ ಪಾದುಕಾಂ ,, ನಮಃ

ಎಂದು ಪೂಜಿಸಿ ಸರ್ವಾಕರ್ಷಣ ಮುದ್ರೆಯನ್ನು ತೋರಿಸಿ

ಸರ್ವಸೌಭಾಗ್ಯದಾಯಕ ಚಕ್ರದಲ್ಲಿ ನೆಲೆಸಿರುವ ಸರ್ವಸಂಕ್ಷೋಭಿಣೀ ಮುಂತಾದ ಸಂಪ್ರದಾಯ ಯೋಗಿನಿಯರು ತಂತಮ್ಮ, ಮುದ್ರಾ, ಸಿದ್ಧಿ, ಆಯುಧ, ವಾಹನ, ಪರಿವಾರಾಲಂಕಾರ ಸಹಿತೆಯರಾಗಿ, ಸರ್ವೋಪಚಾರ ಯುಕ್ತವಾದ ಈ ಪೂಜೆಯನ್ನು ಸ್ವೀಕರಿಸಿ ಸಂತೃಪ್ತೆಯರಾಗಲಿ, ಅವರೆಲ್ಲರಿಗೂ ನಮಸ್ಕಾರ–ಎಂಬುದಾಗಿ ಪುಷ್ಪಾಕ್ಷತೆಗಳಿಂದ ಅರ್ಘ್ಯವನ್ನು ಕೊಟ್ಟು ದೇವಿಯನ್ನು ಅದ್ಭುತ ರಸಾತ್ಮಿಕೆಯೆಂದು ಧ್ಯಾನಮಾಡಿ, ಶರಣಾಗತ ವತ್ಸಲೆ! ದೇವೀ! ನಾಲ್ಕನೆಯ ಆವರಣಾರ್ಚನೆಯನ್ನು ನಿನಗೆ ಭಕ್ತಿಪುರಸ್ಸರವಾಗಿ ಅರ್ಪಣಮಾಡಿದ್ದೇನೆ. ನನ್ನ ಇಷ್ಟಾರ್ಥವನ್ನು ನೆರವೇರಿಸು, ಎಂದು ಪ್ರಾರ್ಥಿಸಿ ಮೂಲಮಂತ್ರದಿಂದ ಗುರುವನ್ನು ಶಿರಸ್ಸಿನಮೇಲೆ ಪುಷ್ಪಾಕ್ಷಗತೆಗಳಿಂದ ಪೂಜಿಸಬೇಕು.

೫ನೆಯ ಆವರಣ

ಸರ್ವಾರ್ಥ ಸಾಧಕ ಚಕ್ರಕ್ಕೆ ಕೈಮುಗಿದು

- ಸರ್ವಸಿದ್ಧಿ ಪ್ರದಾದೇವೀ ಶ್ರೀ ಪಾದುಕಾಂ ಪೂಜಯಾಮಿ ತರ್ಪಯಾಮಿ ನಮಃ
- ಸರ್ವಸಂಪತ್ಪ್ರದಾ ದೇವೀ ಶ್ರೀ ಪಾದುಕಾಂ ,, ನಮಃ
- ಸರ್ವಪ್ರಿಯಂಕರೀ ದೇವೀ ಶ್ರೀ ಪಾದುಕಾಂ ,, ನಮಃ
- ಸರ್ವಮಂಗಳ ಕಾರಿಣೀದೇವೀ ಶ್ರೀ ಪಾದುಕಾಂ ,, ನಮಃ
- ಸರ್ವಕಾಮ ಪ್ರದಾದೇವೀ ಶ್ರೀ ಪಾದುಕಾಂ ,, ನಮಃ
- ಸರ್ವದುಃಖ ಮೋಚಿನೀದೇವೀ ಶ್ರೀ ಪಾದುಕಾಂ ,, ನಮಃ
- ಸರ್ವಮೃತ್ಯು ಪ್ರಶಮನೀದೇವೀ ಶ್ರೀ ಪಾದುಕಾಂ ,, ನಮಃ
- ಸರ್ವವಿಘ್ನ ನಿವಾರಿಣೀದೇವೀ ಶ್ರೀ ಪಾದುಕಾಂ ,, ನಮಃ
- ಸರ್ವಾಂಗ ಸುಂದರೀದೇವೀ ಶ್ರೀ ಪಾದುಕಾಂ ,, ನಮಃ
- ಸರ್ವಸೌಭಾಗ್ಯದಾಯಿನೀದೇವೀ ಶ್ರೀ ಪಾದುಕಾಂ ,, ನಮಃ
- ತ್ರಿಪುರಾ ಚಕ್ರೇಶ್ವರೀದೇವೀ ಶ್ರೀ ಪಾದುಕಾಂ ,, ನಮಃ
- ಮಹಾ ಮಹಾಜ್ಞಪ್ತಾ ಶ್ರೀ ಪಾದುಕಾಂ ,, ನಮಃ

ಎಂದು ಪೂಜಿಸಿ, ಸರ್ವಾರ್ಥಸಾಧಕ ಚಕ್ರದಲ್ಲಿ ನೆಲೆಸಿರುವ ಕುಳಕಾಳಿ ಯೋಗಿನಿಯರು ತಂತಮ್ಮ ಮುದ್ರಾ, ಸಿದ್ಧಿ, ಆಯುಧ, ವಾಹನ, ಪರಿವಾರಾಲಂಕಾರ ಸಹಿತೆಯರಾಗಿ ಸರ್ವೋಪಚಾರಯುಕ್ತವಾದ ಈ ಪೂಜೆಯನ್ನು ಸ್ವೀಕರಿಸಿ ಸಂತೃಪ್ತೆಯರಾಗಲಿ, ಅವರೆಲ್ಲರಿಗೂ ನಮಸ್ಕಾರ–ಎಂಬುದಾಗಿ ಪುಷ್ಪಾಕ್ಷತೆಗಳಿಂದ ಅರ್ಘ್ಯವನ್ನು ಕೊಟ್ಟು, ದೇವಿಯನ್ನು ಹಾಸ್ಯರಸಾತ್ಮಿಕೆಯೆಂದು ಧ್ಯಾನಮಾಡಿ, ಸರ್ವೋನ್ಮಾದಿನೀ ಮುದ್ರೆಯನ್ನು ತೋರಿಸಿ ಶರಣಾಗತ ವತ್ಸಲೆ! ದೇವಿ! ಐದನೆಯ ಆವರಣಾರ್ಚನೆಯನ್ನು ನಿನಗೆ ಭಕ್ತಿಯಿಂದ ಅರ್ಪಣ ಮಾಡಿದ್ದೇನೆ. ನನ್ನ ಇಷ್ಟಾರ್ಥವನ್ನು ಅನುಗ್ರಹಿಸು–ಎಂದು ಪ್ರಾರ್ಥಿಸಿ ಮೂಲಮಂತ್ರದಿಂದ ಗುರುವನ್ನು ಪುಷ್ಪಾಕ್ಷತೆಗಳಿಂದ ಶಿರಸ್ಸಿನಲ್ಲಿ ಪೂಜಿಸಬೇಕು.

ಆರನೆಯ ಆವರಣ

ಸರ್ವರಕ್ಷಾಕರ ಚಕ್ರದಲ್ಲಿ

ಸರ್ವಜ್ಞಾದೇವೀ ಶ್ರೀ ಪಾದುಕಾಂ ಪೂಜಯಾಮಿ ತರ್ಪಯಾಮಿ		ನಮಃ
ಸರ್ವಶಕ್ತಿಮಯಿದೇವೀ ಶ್ರೀ ಪಾದುಕಾಂ	,,	ನಮಃ
ಸರ್ವೈಶ್ವರ್ಯ ಪ್ರದಾದೇವೀ ಶ್ರೀ ಪಾದುಕಾಂ	,,	ನಮಃ
ಸರ್ವಜ್ಞಾನ ಮಯಿದೇವೀ ಶ್ರೀ ಪಾದುಕಾಂ	,,	ನಮಃ
ಸರ್ವವ್ಯಾಧಿ ವಿನಾಶಿನೀದೇವೀ ಶ್ರೀ ಪಾದುಕಾಂ	,,	ನಮಃ
ಸರ್ವಾಧಾರ ಸ್ವರೂಪಿಣೀದೇವೀ ಶ್ರೀ ಪಾದುಕಾಂ	,,	ನಮಃ
ಸರ್ವಪಾಪಹರಾ ದೇವೀ ಶ್ರೀ ಪಾದುಕಾಂ	,,	ನಮಃ
ಸರ್ವಾನಂದಮಯಿ ದೇವೀ ಶ್ರೀ ಪಾದುಕಾಂ	,,	ನಮಃ
ಸರ್ವರಕ್ಷಾ ಸ್ವರೂಪಿಣೀದೇವೀ ಶ್ರೀ ಪಾದುಕಾಂ	,,	ನಮಃ
ಸರ್ವೇಪ್ಸಿತ ಫಲಪ್ರದಾದೇವೀ ಶ್ರೀ ಪಾದುಕಾಂ	,,	ನಮಃ
ತ್ರಿಪುರ ಮಾಲಿನೀ ಚಕ್ರೇಶ್ವರೀ ಶ್ರೀ ಪಾದುಕಾಂ	,,	ನಮಃ
ಮಹಾ ಮಹಾನಂದಾ ಶ್ರೀ ಪಾದುಕಾಂ	,,	ನಮಃ

ಎಂದು ಪೂಜಿಸಿ, ಸರ್ವರಕ್ಷಾಕರ ಚಕ್ರದಲ್ಲಿ ನೆಲೆಸಿರುವ ಸರ್ವಜ್ಞಾ ದೇವಿಯೇ ಮೊದಲಾದ ನಿಗರ್ಭಯೋಗಿನಿಯರು ತಂತಮ್ಮ ಮುದ್ರಾ, ಸಿದ್ಧಿ, ಆಯುಧ, ವಾಹನ, ಪರಿವಾರಾಲಂಕಾರ ಸಹಿತೆಯರಾಗಿ ಸರ್ವೋಪಚಾರ ಯುಕ್ತವಾದ ಈ ಪೂಜೆಯನ್ನು ಸ್ವೀಕರಿಸಿ ಸಂತೃಪ್ತೆಯರಾಗಲಿ, ಅವರೆಲ್ಲರಿಗೂ ನಮಸ್ಕಾರ–ಎಂಬುದಾಗಿ ಪುಷ್ಪಾಕ್ಷತೆಗಳಿಂದ ಅರ್ಘ್ಯವನ್ನು ಕೊಟ್ಟು ದೇವಿಯನ್ನು ಭಯಾನಕ ಸ್ವರೂಪಣಿಯೆಂದು ಭಾವಿಸಿ, ಮಹಾಂಕುಶ ಮುದ್ರೆಯನ್ನು ತೋರಿಸಿ–

ಶರಣಾಗತ ವತ್ಸಲೆ ! ದೇವಿ ! ಆರನೆಯ ಆವರಣಾರ್ಚನೆಯನ್ನು ನಿನಗೆ ಭಕ್ತಿಯಿಂದ ಅರ್ಪಿಸಿದ್ದೇನೆ, ನನ್ನ ಇಷ್ಟಾರ್ಥವನ್ನು ನೆರವೇರಿಸು–ಎಂದು ಪ್ರಾರ್ಥಿಸಿ ಮೂಲಮಂತ್ರದಿಂದ ಗುರುವನ್ನು ಶಿರಸ್ಸಿನ ಮೇಲೆ ಪೂಜಿಸಬೇಕು.

ಏಳನೆಯ ಆವರಣ

ಸರ್ವರೋಗಹರ ಚಕ್ರದಲ್ಲಿ

ವಶಿನೀ ವಾಗ್ದೇವತಾ ಶ್ರೀ ಪಾದುಕಾಂ ಪೂಜಯಾಮಿ
ತರ್ಪಯಾಮಿ ನಮಃ

ಕಾಮೇಶ್ವರೀ ವಾಗ್ದೇವತಾ ಶ್ರೀ ಪಾದುಕಾಂ ,, ನಮಃ

ಮೋದಿನೀ ವಾಗ್ದೇವತಾ ಶ್ರೀ ಪಾದುಕಾಂ ,, ನಮಃ

ವಿಮಲಾ ವಾಗ್ದೇವತಾ ಶ್ರೀ ಪಾದುಕಾಂ ,, ನಮಃ

ಅರುಣಾ ವಾಗ್ದೇವತಾ ಶ್ರೀ ಪಾದುಕಾಂ ,, ನಮಃ

ಜಯಿನೀ ವಾಗ್ದೇವತಾ ಶ್ರೀ ಪಾದುಕಾಂ ,, ನಮಃ

ಸರ್ವೇಶ್ವರೀ ವಾಗ್ದೇವತಾ ಶ್ರೀ ಪಾದುಕಾಂ ,, ನಮಃ

ಕೌಳಿನೀ ವಾಗ್ದೇವತಾ ಶ್ರೀ ಪಾದುಕಾಂ ,, ನಮಃ

ತ್ರಿಪುರಾಚಕ್ರೇಶ್ವರೀ ಶ್ರೀ ಪಾದುಕಾಂ ,, ನಮಃ

ಮಹಾ ಮಹಾಸ್ಪಂದಾ ಶ್ರೀ ಪಾದುಕಾಂ ,, ನಮಃ

ಎಂದು ಪೂಜಿಸಿ ಸರ್ವರೋಗಹರ ಚಕ್ರದಲ್ಲಿ ನೆಲೆಸಿರುವ ವಶಿನೀ ಮೊದಲಾದ ರಹಸ್ಯಯೋಗಿನಿಯರು ತಂತಮ್ಮ ಮುದ್ರಾ, ಸಿದ್ಧಿ, ಆಯುಧ, ವಾಹನ, ಪರಿವಾರಾಲಂಕಾರ ಸಹಿತೆಯರಾಗಿ ಸರ್ವೋಪಚಾರ ಯುಕ್ತವಾದ ಈ ಪೂಜೆಯನ್ನು ಸ್ವೀಕರಿಸಿ ಸಂತೃಪ್ತೆಯರಾಗಲಿ, ಅವರೆಲ್ಲರಿಗೂ ನಮಸ್ಕಾರ-ಎಂಬುದಾಗಿ ಪುಷ್ಪಾಕ್ಷತೆಗಳಿಂದ ಅರ್ಘ್ಯಕೊಟ್ಟು ದೇವಿಯನ್ನು ಬೀಭತ್ಸರಸಾತ್ಮಿಕೆಯೆಂದು ಭಾವಿಸಿ ಸರ್ವಖೇಚರೀ ಮುದ್ರೆಯನ್ನು ತೋರಿಸಿ,

ಶರಣಾಗತ ವತ್ಸಲೆ ! ದೇವಿ ! ಏಳನೆಯ ಆವರಣಾರ್ಚನೆಯನ್ನು ನಿನಗೆ ಭಕ್ತಿಯಿಂದ ಅರ್ಪಣಮಾಡಿದ್ದೇನೆ. ನನ್ನ ಇಷ್ಟಾರ್ಥವನ್ನು ಅನುಗ್ರಹಿಸು ಎಂಬುದಾಗಿ ಪ್ರಾರ್ಥಿಸಿ, ಮೂಲಮಂತ್ರದಿಂದ ಗುರುವನ್ನು ಶಿರಸ್ಸಿನ ಮೇಲೆ ಪೂಜಿಸಬೇಕು.

ಎಂಟನೆಯ ಆವರಣ

ಸರ್ವಸಿದ್ಧಿಪ್ರದ ಚಕ್ರದಲ್ಲಿ

ಜೃಂಭಿಣಿಯರಿಗೆ ನಮಸ್ಕಾರ–

ಬಾಣಶಕ್ತಿ ಶ್ರೀ ಪಾದುಕಾಂ ಪೂಜಯಾಮಿ ತರ್ಪಯಾಮಿ ನಮಃ

ವಶೀಕರ ಶಕ್ತಿಗೆ ನಮಸ್ಕಾರ–

ಕಾಮೇಶ್ವರೀ ಪಾಶಶಕ್ತಿ ಶ್ರೀ ಪಾದುಕಾಂ ,, ನಮಃ

ಸ್ತಂಭನ ಶಕ್ತಿಗೆ ನಮಸ್ಕಾರ–

ಕಾಮೇಶ್ವರ ಅಂಕುಶ ಶಕ್ತಿ ಶ್ರೀ ಪಾದುಕಾಂ ,, ನಮಃ

ಅಗ್ನಿ ಚಕ್ರದಲ್ಲಿ ಕಾಮಗಿರಿ ಪೀಠದಲ್ಲಿ ಬ್ರಹ್ಮಾತ್ಮಕ ಶಕ್ತಿ
ಕಾಮೇಶ್ವರೀ ದೇವೀ ಶ್ರೀ ಪಾದುಕಾಂ ,, ನಮಃ

ಸೂರ್ಯಚಕ್ರದಲ್ಲಿ ಜಾಲಂಧರ ಪೀಠದಲ್ಲಿ ವಿಷ್ಣ್ವಾತ್ಮಕ
ಶಕ್ತಿ ಶ್ರೀವಜ್ರೇಶ್ವರೀ ದೇವೀ ಶ್ರೀ ಪಾದುಕಾಂ ,, ನಮಃ

ಸೋಮ ಚಕ್ರದಲ್ಲಿ ಪೂರ್ಣಗಿರಿ ಪೀಠದಲ್ಲಿ ರುದ್ರಾತ್ಮಕ
ಶಕ್ತಿ ಭಗಮಾಲಿನೀ ದೇವೀ ಶ್ರೀ ಪಾದುಕಾಂ ,, ನಮಃ

ತ್ರಿಪುರಾಂಬಾ ಚಕ್ರೇಶ್ವರೀ ಶ್ರೀ ಪಾದುಕಾಂ ,, ನಮಃ

ಮಹಾ ಮಹಾಶಯಾ ಶ್ರೀ ಪಾದುಕಾಂ ,, ನಮಃ

ಎಂಬುದಾಗಿ ಪೂಜಿಸಿ ಸರ್ವ ಸಿದ್ಧಿಪ್ರದ ಚಕ್ರದಲ್ಲಿ ನೆಲೆಸಿರುವ ಕಾಮೇಶ್ವರಿ ಮೊದಲಾದ ಅತಿ ರಹಸ್ಯ ಯೋಗಿನಿಯರು ತಂತಮ್ಮ ಮುದ್ರಾ, ಸಿದ್ಧಿ, ಆಯುಧ ವಾಹನ, ಪರಿವಾರಾಲಂಕಾರ ಸಹಿತೆಯರಾಗಿ ಸರ್ವೋಪಚಾರ ಯುಕ್ತವಾದ ಈ ಪೂಜೆಯನ್ನು ಸ್ವೀಕರಿಸಿ ಸಂತೃಪ್ತೆಯರಾಗಲಿ, ಅವರೆಲ್ಲರಿಗೂ ನಮಸ್ಕಾರ-ಎಂಬುದಾಗಿ ಪುಷ್ಪಾಕ್ಷತೆಗಳಿಂದ ಅರ್ಘ್ಯವನ್ನು ಕೊಟ್ಟು ದೇವಿಯನ್ನು ರೌದ್ರರಸಾತ್ಮಿಕೆಯೆಂದು ಧ್ಯಾನಿಸಿ, ಸರ್ವಬೀಜ ಮುದ್ರೆಯನ್ನು ತೋರಿ—

ಶರಣಾಗತ ವತ್ಸಲೆ ! ದೇವಿ ! ಎಂಟನೆಯ ಆವರಣಾರ್ಚನೆಯನ್ನು ನಿನಗೆ ಭಕ್ತಿಯಿಂದ ಸಮರ್ಪಿಸಿದ್ದೇನೆ. ನನ್ನ ಇಷ್ಟಾರ್ಥವನ್ನು ನೆರವೇರಿಸು ಎಂಬು

ದಾಗಿ ಪ್ರಾರ್ಥಿಸಿ, ಮೂಲಮಂತ್ರದಿಂದ ಗುರುವನ್ನು ಶಿರಸ್ಸಿನ ಮೇಲೆ ಪುಷ್ಪಾಕ್ಷತೆಗಳಿಂದ ಪೂಜಿಸಬೇಕು.

ಒಂಭತ್ತನೆಯ ಆವರಣ

ಸರ್ವಾನಂದಮಯ ಬೈಂದವ ಚಕ್ರದ ಮೇಲೆ

ಪರಬ್ರಹ್ಮ ಚಕ್ರದ ಮಹೋಡ್ಯಾಣ ಪೀಠದಲ್ಲಿ
ಶ್ರೀಮಹಾ ತ್ರಿಪುರ ಸುಂದರೀ ಚಕ್ರೇಶ್ವರೀ ಶ್ರೀ ಪಾದುಕಾಂ
ಪೂಜಯಾಮಿ ತರ್ಪಯಾಮಿ ನಮಃ
ಮಹಾ ಮಹಾ ಶ್ರೀಚಕ್ರನಗರ ಸಾಮ್ರಾಜ್ಞೀ
ಶ್ರೀ ಪಾದುಕಾಂ ,, ನಮಃ
ಲಲಿತಾಂಬಾ ಶ್ರೀ ಪಾದುಕಾಂ ,, ನಮಃ
ಸರ್ವಮಂತ್ರೇಶ್ವರೀ ಶ್ರೀ ಪಾದುಕಾಂ ,, ನಮಃ
ಸರ್ವಪೀಠೇಶ್ವರೀ ಶ್ರೀ ಪಾದುಕಾಂ ,, ನಮಃ
ಸರ್ವವಿದ್ಯೇಶ್ವರೀ ಶ್ರೀ ಪಾದುಕಾಂ ,, ನಮಃ
ಸರ್ವವಾಗೀಶ್ವರೀ ಶ್ರೀ ಪಾದುಕಾಂ ,, ನಮಃ
ಸರ್ವಯೋಗೀಶ್ವರೀ ಶ್ರೀ ಪಾದುಕಾಂ ,, ನಮಃ
ಸರ್ವಸಿದ್ಧೇಶ್ವರೀ ಶ್ರೀ ಪಾದುಕಾಂ ,, ನಮಃ
ಸರ್ವತತ್ವೇಶ್ವರೀ ಶ್ರೀ ಪಾದುಕಾಂ ,, ನಮಃ
ಸಕಲ ಜಗದುತ್ಪತ್ತಿ ಶ್ರೀ ಮಾತೃಕಾ ಶ್ರೀ ಪಾದುಕಾಂ ,, ನಮಃ
ಆಮ್ನಾಯ ದೇವತಾ ಶ್ರೀ ಪಾದುಕಾಂ ,, ನಮಃ
ಜ್ಞಾನಾಂಬಾ ಶ್ರೀ ಪಾದುಕಾಂ ,, ನಮಃ
ಅನ್ನಪೂರ್ಣೇಶ್ವರೀ ಶ್ರೀ ಪಾದುಕಾಂ ,, ನಮಃ
ಪಂಚರತ್ನೇಶ್ವರೀ ಶ್ರೀ ಪಾದುಕಾಂ ,, ನಮಃ
ಷಡ್ದರ್ಶನ ದೇವತಾ ಶ್ರೀ ಪಾದುಕಾಂ ,, ನಮಃ

(ಮರಳಿ) ಸರ್ವಾನಂದಮಯ ಚಕ್ರದಲ್ಲಿ ಕಾಮಕಳಾತ್ಮಿಕೆಯಾದ ಮೂಲ ದೇವಿ ಶ್ರೀ ಲಲಿತೆಯನ್ನು ಧ್ಯಾನಮಾಡಿ, ಮೂಲಮಂತ್ರದಿಂದಲೇ ಆವಾಹನಾದಿ ದೀಪದವರೆಗಿನ ಪೂಜೆಯನ್ನು ಮಾಡಿ, ಆಚಮಾನಕೊಟ್ಟು, ದೇವಿಯ ಎಡಭಾಗ ದಲ್ಲಿ ಚಚ್ಚೌಕವಾಗಿ ಮಂಡಲಮಾಡಿ, ಬೆಂದ ಪದಾರ್ಥಗಳನ್ನು ದೇವಿಯ ಎಡ ಭಾಗದಲ್ಲಿಯೂ ಹಸಿಯ ವಸ್ತುಗಳನ್ನು ಬಲಭಾಗದಲ್ಲಿಯೂ ವೈಭವಕ್ಕೆ ತಕ್ಕಂತೆ ಇರಿಸಿ, ಮೂಲದಿಂದ ಪ್ರೋಕ್ಷಣೆಮಾಡಿ, ಧೇನುಮುದ್ರೆಯನ್ನು ತೋರಿಸಿ, ಆಪೋಶನಕೊಟ್ಟು, ದೇವಿ ! ಷಡ್ರಸೋಪೇತವಾದ ಪಂಚವಿಧವಾದ ಪರಮಾನ್ನ ವನ್ನು ಈ ಸುವರ್ಣಪಾತ್ರೆಯಲ್ಲಿ ಸಮರ್ಪಿಸಿದ್ದೇನೆ–ಅಕ್ಕರೆಯಿಂದ ಸ್ವೀಕರಿಸು ಎಂಬುದಾಗಿ ಪ್ರಾರ್ಥನೆಮಾಡಿ, ಪ್ರಾಣಾಹುತಿಗಳ ತರುವಾಯ ಸರ್ವತತ್ವ ವ್ಯಾಪಿನಿಯಾದ ಶ್ರೀಲಲಿತೆಯು ತೃಪ್ತಿಪಡಲಿ, ಎಂದು ಹೇಳಿ, ಕ್ಷಣಕಾಲ ಕಣ್ಣು ಮುಚ್ಚಿ ದೇವಿಯು ಭೋಜನ ಮಾಡಿದಂತೆ ಭಾವಿಸಿ, ಕಣ್ದೆರೆದು, ಪಾನೀಯ, ಉತ್ತರಾಪೋಶನ, ಕರಪ್ರಕ್ಷಾಳನ, ಗಂಡೂಷ, ಪುನರಾಚಮನ, ಕರ್ಪೂರತಾಂಬೂಲ ದಕ್ಷಿಣಾದಿಗಳನ್ನು ಸಮರ್ಪಿಸಿ, ಇಷ್ಟಾಸಿದ್ಧಿ ನಮಃ ಎಂದು ಹೇಳಿ, ಸ್ವಾಧಿ ಷ್ಠಾನ ಮುದ್ರೆಯನ್ನು ತೋರಿಸಿ, ಮುದ್ರಾಭಿಮಾನಿ ದೇವತೆಗಳನ್ನು ಪಂಚೋಪ ಚಾರಗಳಿಂದ ಪೂಜಿಸಿ, ದೇವಿಯ ಎಡಭಾಗದಲ್ಲಿ, ದೇವಿಯ ಪರಿಚಾರಿಕೆಯರನ್ನೂ ಪಂಚೋಪಚಾರಗಳಿಂದ ತೃಪ್ತಿಪಡಿಸಿ, ನೀರಾಜನ ಮಂತ್ರಪುಷ್ಪಗಳನ್ನು ಸಮ ರ್ಪಿಸಿ, " ಸರ್ವಮಂಗಳ ಮಾಂಗಲ್ಯೇ........ನಾರಾಯಣಿ ನಮೋಸ್ತುತೇ " ಈ ಮಂತ್ರದಿಂದ ೫ ಸಲ ಸಾಷ್ಟಾಂಗ ಪ್ರಣಾಮಮಾಡಿ, ಎದ್ದು ನಿಂತು, ಕೈಯಲ್ಲಿ ಪುಷ್ಪಾಂಜಲಿಯನ್ನಿಟ್ಟುಕೊಂಡು.

" ದೇವಿ ! ನಿನ್ನ ಆವಾಹನ, ವಿಸರ್ಜನ, ಪೂಜಾವಿಧಿಗಳನ್ನು ನಾನು ಅರಿತ ವನಲ್ಲ ಪರಮೇಶ್ವರಿ ! ಕ್ಷಮಿಸು ;

ಉಪಚಾರಗಳ ಸೋಗಿನಿಂದ ಅನೇಕ ವಿಧವಾಗಿ ನಿನಗೆ ಅಪಚಾರಗಳನ್ನು ಮಾಡಿದ್ದೇನೆ ; ಅವುಗಳನ್ನೆಲ್ಲ ಮನ್ನಿಸು ;

ಅನುದಿನವೂ ಸಾವಿರಾರು ಅಪರಾಧಗಳು ನನ್ನಿಂದ ನಡೆಯುತ್ತವೆ ; ಅವುಗಳನ್ನೆಲ್ಲಾ ಕ್ಷಮಿಸು ;

ಸಾವಿರಾರು ಅಪರಾಧಗಳನ್ನು ಮಾಡಿ ಒಂದುಸಲ "ಜಗನ್ಮಾತೆ"ಯೆಂದು ಹೇಳಿದಲ್ಲಿ, ಅಂತಹವನಿಗೆ ಲಭಿಸುವ ಸದ್ಗತಿಯು ಬ್ರಹ್ಮಾದಿ ದೇವತೆಗಳೂ ಹೊಂದಲಾರರು ;

ಜಗನ್ಮಾತೆ ! ನಾನು ಅಪರಾಧಿ ; ಈಗ ನಿನ್ನ ಮರೆಹೊಕ್ಕಿದ್ದೇನೆ ; ಈಗ ನಿನ್ನ ದಯೆಗೆ ಪಾತ್ರನಾಗಿದ್ದೇನೆ, ನಿನ್ನ ಇಷ್ಟದಂತೆ ಮಾಡು ನಿನ್ನನ್ನು ಪೂಜಿಸುವಲ್ಲಿ ಅಜ್ಞಾನದಿಂದಲೋ, ವಿಸ್ಮೃತಿಯಿಂದಲೋ, ಭ್ರಾಂತಿಯಿಂದಲೋ, ಎಷ್ಟೋ ನ್ಯೂನಾತಿರೇಕಗಳು ನಡೆದಿವೆ ; ದೇವಿ, ಪರಮೇಶ್ವರಿ ! ಅವುಗಳನ್ನೆಲ್ಲ ಕ್ಷಮಿಸು ;

ಜಗನ್ಮಾತೆ ! ಕಾಮೇಶ್ವರಿ ! ಸಚ್ಚಿದಾನಂದ ಸ್ವರೂಪಿಣಿ ! ನಾನು ನಿನ್ನ (ಮರೆಹೊಕ್ಕ)ವನೆಂದು ತಿಳಿದು ಕ್ಷಮಿಸು ;

ಮಂಗಳ ಸ್ವರೂಪಿಣೀ ! ತಿಳಿದೋ ತಿಳಿಯದೆಯೋ ನಾನು ಮಾಡಿದ ಈ ಕಾರ್ಯವೆಲ್ಲ ನಿನ್ನ ಸೇವೆಯೆಂದು ಭಾವಿಸಿ ಕ್ಷಮಿಸು ;

ನಿನ್ನ ಪೂಜೆಯಲ್ಲಿ ಆಗಿರುವ ದ್ರವ್ಯಲೋಪ, ಮಂತ್ರಲೋಪ, ಕ್ರಿಯಾಲೋಪಗಳನ್ನೆಲ್ಲಾ ದಯೆಯಿಂದ ಕ್ಷಮಿಸು ;

ಜನನಿ ! ಜಾಗ್ರತ್, ಸ್ವಪ್ನ, ಸುಷುಪ್ತಿಗಳೆಂಬ ಮೂರು ಅವಸ್ಥೆಗಳಲ್ಲಿ ನಾನು ಏನೇನನ್ನು ಮಾಡುವೆನೋ ಅದೆಲ್ಲವೂ ನಿನ್ನ ಪೂಜೆಯಾಗಿ ಪರಿಣಮಿಸಿ ನನ್ನ ಮೇಲ್ಮೆಗೆ ಸಾಧನವಾಗಲಿ ;

ಜಗನ್ಮಾತೆ ! ಬೆಳಗಿನಿಂದ ಸಂಜೆಯುವರೆಗೂ, ಸಂಜೆಯಿಂದ ಮರುದಿನ ಬೆಳಗಾಗುವವರೆಗೂ ನಾನು ಏನೇನನ್ನು ಮಾಡುವೆನೋ ಅದೆಲ್ಲ ನಿನ್ನ ಪೂಜೆಯಾಗಿ ಪರಿಣಮಿಸಲಿ ;

ಮಂಗಳಾಂಗಿ ! ನಡೆಯುವಾಗ ಎಡವಿದಲ್ಲಿ ಭೂಮಿಯೇ ಆಸರೆ ; ನಿನ್ನ ವಿಷಯದಲ್ಲಿ ಅಪರಾಧ ಮಾಡಿದವರಿಗೂ ನೀನೇ ಗತಿ ;

"ದೇವಿ! ತಾಯಿ, ತಂದೆ, ಬಂಧು, ಮಿತ್ರ, ವಿದ್ಯೆ, ದ್ರವ್ಯ, ಎಲ್ಲವೂ ನೀನೇ" ಎಂಬುದಾಗಿ ಭಕ್ತಿಯಿಂದ ಪ್ರಾರ್ಥಿಸಿ, ಶಂಖವನ್ನು ಎತ್ತಿಹಿಡಿದು ದೇವಿಯ ಮೇಲೆ ಮೂರುಸಲ ಸುತ್ತಿಸಿ ;

"ದೇವಿ ! ನಾನು ಮಾಡಿದ ಈ ಪೂಜೆಯು ಸಾಧುವೋ, ಅಸಾಧುವೋ ಇದೆಲ್ಲವೂ ನಿನ್ನ ಸೇವೆಯೆಂದು ಭಾವಿಸಿ, ನನ್ನನ್ನು ಕ್ಷಮಿಸು" ಎಂದು ಹೇಳಿ–

ಈ ಸರ್ವಾನಂದಮಯ ಚಕ್ರದಲ್ಲಿ ನೆಲೆಸಿರುವ ಸಕಲ ಜಗದುತ್ಪತ್ತಿ ಮಾತೃಕಾಪರ ಬ್ರಹ್ಮೀಶಕ್ತಿ ಮೊದಲಾದವರು ತಂತಮ್ಮ ಮುದ್ರಾ. ಸಿದ್ಧಿ, ಆಯುಧ, ವಾಹನ, ಪರಿವಾರಾಲಂಕಾರ ಸಹಿತೆಯರಾಗಿ ನಾನು ಭಕ್ತಿಯಿಂದ ನೆರವೇರಿಸಿದ ಈ ಪೂಜೆಯಿಂದ ಸಂತೃಪ್ತರಾಗಲಿ–ಅವರೆಲ್ಲರಿಗೂ ನಮಸ್ಕಾರ ಎಂದು ಹೇಳಿ ಬಿಂದುತ್ರಯದಿಂದ ಗಂಧಪುಷ್ಪಾಕ್ಷತೆಗಳೊಂದಿಗೆ ಅರ್ಘ್ಯವನ್ನು ಕೊಟ್ಟು ತ್ರಿಪುರಾ ಚಕ್ರೇಶ್ವರಿಗೆ ಕೈಮುಗಿದು ;

ದೇವಿಯನ್ನು ಶಾಂತರಸಾತ್ಮಿಕೆಯೆಂದು ಭಾವಿಸಿ ;

"ಶರಣಾಗತವತ್ಸಲೆ ! ದೇವಿ ! ಒಂಭತ್ತನೆಯ ಆವರಣ ಪೂಜೆಯನ್ನು ಭಕ್ತಿಯಿಂದ ನೆರವೇರಿಸಿ ನಿನಗೆ ಸಮರ್ಪಿಸಿದ್ದೇನೆ ನನ್ನ ಇಷ್ಟಾರ್ಥನನ್ನು ಅನುಗ್ರಹಿಸು-"

ಎಂದುಹೇಳಿ ದೇವಿಯ ಎಡಗೈಯಲ್ಲಿ ಮಂತ್ರಾಕ್ಷತೋದಕವನ್ನು ಸಮರ್ಪಿಸಬೇಕು.

ಶಾಂತಿಸ್ತವ

ಮರಣರಹಿತವಾದ ಮೋಕ್ಷ ಸಾಮ್ರಾಜ್ಯವನ್ನು ಅನುಗ್ರಹಿಸುವ, ಪ್ರಸನ್ನವಾದ ತೇಜಸ್ಸಿಗೆ ನಿಧಿಯಂತಿರುವ ಹರನಪಾದ ಪಂಕಜವು ಮೆರೆಯುತ್ತಿರಲಿ-ಅನಂತವಾದ ಗತಿಗೆ ದಾರಿಯನ್ನು ತೋರುವ ಅರವತ್ತುನಾಲ್ಕು ಮಂದಿ ಯೋಗಿನಿಯರ ಸಮುದಾಯಕ್ಕೆ ಕೈಮುಗಿಯುತ್ತೇನೆ.

ಯೋಗಿನೀಗಣದ ನಡುವೆ ಮಾತೃಕಾಮಂಡಲ ಸಮೇತನಾಗಿ ಮೆರೆಯು-ವನೂ ಭೈರವೀಪ್ರಿಯನೂ ಆದ ಭೈರವನಿಗೆ ತಲೆಬಾಗಿ ಮಣಿಯುತ್ತೇನೆ. ಅನಾದಿಯೂ ಭಯಂಕರವೂ ಎನಿಸಿದ ಸಂಸಾರವೆಂಬ ಘೋರವ್ಯಾಧಿಯನ್ನು ನಿರ್ಮೂಲಮಾಡುವವನೂ, ಹುಟ್ಟುಸಾವುಗಳಿಗೆ ಔಷಧವನ್ನು ಮಾಡತಕ್ಕವನೂ ಆದ ಶ್ರೀ ನಾಥನೆಂಬ ವೈದ್ಯನಿಗೆ ನಮಸ್ಕಾರ. ದೇವತೆಗಳು ಪೂಜಿಸಲು ಯೋಗ್ಯವಾದ ಶ್ರೀಚಕ್ರದ ಲಾಭದಿಂದ ಎಲ್ಲಾ ಬಗೆಯ ಆಪತ್ತುಗಳೂ ಪಾಪವೂ ರೋಗಗಳೂ ನಾಶವಾಗಲಿ.

ದಿವ್ಯವಾದ ಶ್ರೀ ಚಕ್ರವನ್ನು ಪೂಜಿಸತಕ್ಕವರಿಗೂ, ಈ ಸಂಪ್ರದಾಯವನ್ನು ಗುಟ್ಟಾಗಿ ಕಾಪಾಡುವವರಿಗೂ ಯತಿಶ್ರೇಷ್ಠರಿಗೂ ಯೋಗೀಶ್ವರರಿಗೂ ತಪೋಧನರಿಗೂ ದೇಶಕ್ಕೂ, ರಾಷ್ಟ್ರಕ್ಕೂ, ರಾಜಕುಟುಂಬಗಳಿಗೂ ಭಗವಂತನಾದ ಕುಲೇಶ್ವರನು ಶಾಂತಿಯನ್ನು ದಯಪಾಲಿಸಲಿ.

ದೇವಲೋಕದಲ್ಲಿಯೂ ಭೂಮಂಡಲದಲ್ಲಿಯೂ ಜಲದಲ್ಲಿಯೂ ವಾಯುಮಂಡಲದಲ್ಲಿಯೂ ಅಂತರಿಕ್ಷದಲ್ಲಿಯೂ ನೆಲೆಸಿರುವವರೂ, ಶಾಶ್ವತವಾದ ವೈಭವದಿಂದಲೂ ಪ್ರಭಾವದಿಂದಲೂ ಮೆರೆಯುವವರೂ ಕೌಳಮಾರ್ಗ ಪರಿಪಾಲನ ನಿರತೆಯರೂ ಆದ ಎಲ್ಲಾ ದೇವತೆಗಳೂ ಸರ್ವಕಾಲದಲ್ಲಿಯೂ ನನಗೆ ಶಾಂತಿಯನ್ನು ಅನುಗ್ರಹಿಸಲಿ.

ಶ್ರೀಚಕ್ರದ ಕೋಣಗಳಲ್ಲಿಯೂ, ನಮ್ಮ ದೇಹದ ರೋಮ ಕೂಪಗಳಲ್ಲಿಯೂ, ನರಗಳಲ್ಲಿಯೂ, ರಕ್ತಮಜ್ಜಾದಿಧಾತು ವರ್ಗದಲ್ಲಿಯೂ, ಶ್ವಾಸೋಚ್ಛ್ವಾಸಗಳಲ್ಲಿಯೂ ನೆಲೆಸಿರುವ ಸಕಲ ದೇವತೆಗಳೂ, ಭಗವತಿಯ ಶತ್ರುಗಳನ್ನು ನಿರ್ಮೂಲಗೊಳಿಸುವುದರಲ್ಲಿ ಆಸಕ್ತಿಯುಳ್ಳವರಾಗಿ, ಈ ಪೂಜೆಯಿಂದ ತೃಪ್ತಿಯನ್ನು ಪಡೆಯಲಿ.

ಚಕ್ರವರ್ತಿನಿಯಾದ ಶ್ರೀ ಲಲಿತಾಪರಮೇಶ್ವರಿಯ ಮಹಿಮೆಯಿಂದ ಮೂರು ಲೋಕಗಳನ್ನೂ ಸ್ಥಿರವಾಗಿ ಆವರಿಸಿಕೊಂಡಿರುವ ಸಮಸ್ತಯೋಗಿನೀ ಸಮುದಾಯಕ್ಕೂ ನಿರಂತರವೂ ತಲೆಬಾಗಿ ನಮಸ್ಕರಿಸುತ್ತೇನೆ.

ಭೈರವೀ ಶಕ್ತಿಯೂ ಭೈರವನ ಶಾಸನವೂ ಶ್ರುತಿಸಮ್ಮತವಾದ ಧರ್ಮವನ್ನು ದೂಷಿಸತಕ್ಕವರು ಇಲ್ಲವಾಗಲಿ.

ಶಿವನೇ ಮೊದಲಾಗಿ ಭೂಮಂಡಲದವರೆಗೂ, ಬ್ರಹ್ಮಾದಿಸ್ತಂಬಪರ್ಯಂತವೂ ಕಾಲಾಗ್ನಿ ಮೊದಲು ಶಿವನವರೆಗೂ, ಇರುವ ಜಗತ್ತೆಲ್ಲವೂ ಈ ಯಜ್ಞದಿಂದ ತೃಪ್ತಿ ಪಡೆಯಲಿ.

ಎಂದು ಪ್ರಾರ್ಥಿಸಿ ಶಾಂತಿಮಂತ್ರಗನ್ನೆಲ್ಲ ಹೇಳಿ ಛತ್ರಚಾಮರಾದಿ ರಾಜೋಪಚಾರಗಳನ್ನು ನೆರವೇರಿಸಿ, ಪೂಜಾಪರಿಪೂರ್ತಿ ಮಾಡಿದ ಬಳಿಕ ಕಲಶವನ್ನು ತಲೆಯುವರಿಗೂ ಎತ್ತಿ ಇರಿಸಿ, ಆಚಮನಮಾಡಿ, ಕುಮಾರೀ ಸುವಾಸಿನಿಯರನ್ನು ಪೂಜಿಸಿ, ತೀರ್ಥ ಪ್ರಸಾದಗಳನ್ನು ಸ್ವೀಕರಿಸಿ, ಬ್ರಾಹ್ಮಣ ಸುವಾಸಿನೀ ಭೋಜನಾನಂತರ ತಾನೂ ಭೋಜನ ಮಾಡಬೇಕು. (ಈ ನಿಯಮವು ಯತಿಗಳಿಗೆ ಅನ್ವಯಿಸುವುದಿಲ್ಲ.)

ಇದೇ ಸುಗಮವಾದ ವಿಧಾನ, ದಕ್ಷಿಣಾಚಾರ ನಿರತರಾದವರಿಗೆ ವಿಹಿತವಾದುದು ಇದೇಕ್ರಮ. ವೇದೋಕ್ತ ಕರ್ಮನಿಷ್ಠರಾದವರಿಗೆ ಕಲಶ, ಶಂಖ-ಇವೆರಡೇ ಪಾತ್ರಗಳ ಹೊರತು ಬೇರೆ ಇಲ್ಲವೆಂಬುದು ಪ್ರಾಚೀನ ಕರ್ಮನಿಷ್ಠರ ನಿಯಮ. ತಾಂತ್ರಿಕ ದೀಕ್ಷೆಯನ್ನು ಕೈಕೊಂಡು ಭಗವತಿಯನ್ನು ಆರಾಧಿಸತಕ್ಕವರು ಪಾತ್ರಾಸಾದನಾದಿ ವಿಧಾನವನ್ನು ಇತರ ತಂತ್ರ ಗ್ರಂಥಗಳಲ್ಲಿ ಕಾಣಬಹುದು.

ಶ್ರೀ ಜಗದಂಬಾರ್ಪಣಮಸ್ತು.

ಶ್ರೀ ಶ್ರೀ ಶಿವಗಂಗಾ ಶ್ರೀಗಳವರು ಶ್ರೀ ಚಕ್ರ ಪೂಜೆ ಮಾಡುತ್ತಿರುವುದು.

॥ ಶ್ರೀ ॥

ಶ್ರೀ ವಿದ್ಯೋಪಾಸನೆಯು ಉತ್ತರ ದೇಶಕ್ಕಿಂತಲೂ ದಕ್ಷಿಣ ದೇಶದಲ್ಲಿಯೇ ವಿಶೇಷವಾಗಿ ಪ್ರಚಾರದಲ್ಲಿದೆ. ಸಾಮಾನ್ಯವಾಗಿ ಶಾಂಕರ ಸಂಪ್ರದಾಯದ ಗುರುಪೀಠಗಳಲ್ಲೆಲ್ಲಾ ಶ್ರೀವಿದ್ಯೋಪಾಸನೆಯು ಸಂಪ್ರದಾಯ ವಾಗಿ ಬಂದಿರುತ್ತದೆ. ಶ್ರೀ ಶೃಂಗೇರೀ, ಶ್ರೀ ಶಿವಗಂಗಾ ಸಂಸ್ಥಾನಗಳು ಮಾತ್ರ ಈ ಉಪಾಸನೆಯನ್ನು ವಿಶೇಷವಾಗಿ ಕೊಂಡಾಡುತ್ತವೆ.

ಅನೂಚಾನ ಪರಂಪರೆಗೆ ಸೇರಿದ ಸದ್ಗುರುವಿನ ಮೂಲಕ ಉಪದೇಶವನ್ನು ಪಡೆದು ಸಂಸ್ಕಾರವನ್ನು ಹೊಂದಿದವರು ಮಾತ್ರವೇ ಈ ವಿದ್ಯೆಗೆ ಅಧಿಕಾರಿಯೇ ಹೊರತು, ಕೇವಲ ಪುಸ್ತಕಗಳಲ್ಲಿನ ಮಂತ್ರಗಳನ್ನು ಉಪಾಸನೆ ಮಾಡತೊಡಗಿದರೆ ಉಪಾಸಕರಿಗೆ ಮೇಲ್ಮೆಯುಂಟಾಗುವುದಕ್ಕೆ ಪ್ರತಿಯಾಗಿ ಕೀಳು ಸಂಭವಿಸುವುದೇ ಅನೇಕವಾಗಿ ಕಾಣಬರುತ್ತಿದೆ. ಶ್ರೀದೇವಿಯ ಪರಿವಾರದೇವತೆಗಳಾದ ಯೋಗಿನಿ ಯರ ಶಾಪಕ್ಕೂ ಗುರಿಯಾಗುತ್ತಾರೆ. ಆ ಕಾರಣದಿಂದ ಗುರ್ವನುಗ್ರಹ ಪಾತ್ರ ರಾದವರು ಮಾತ್ರವೇ ಕಲ್ಪೋಕ್ತಪೂಜಾದಿಗಳನ್ನು ಶ್ರದ್ಧಾಭಕ್ತಿ ನಿಯಮಗಳಿಂದ ನೆರವೇರಿಸಬೇಕು.

ಸ್ವಯಂ ಸಂಪಾದ್ಯ ಸರ್ವಾಣಿ ಶ್ರದ್ಧಯಾ ಸಾಧನಾನಿ ಯಃ ।
ಪೂಜಯೇತ್ ತತ್ಪರೋ ದೇವೀಂ ಸ ಲಭೇತಾಖಿಲಂ ಫಲಂ ॥
ಪೂಜನೇನ ಫಲಾರ್ಧಂಸ್ಯಾತ್ ಅನ್ಯದತ್ತೈಸ್ತು ಸಾಧನೈಃ ।
ಯಥಾಕಥಂಚಿದ್ ದೇವ್ಯರ್ಚಾ ವಿಧೇಯಾ ಶ್ರದ್ಧಯಾನ್ವಿತೈಃ ॥

ಉಪಾಸಕರು ಸ್ವಂತವಾಗಿ ಸಂಪಾದಿಸಿದ ಪೂಜೋಪಕರಣಗಳಿಂದ ಶ್ರದ್ಧಾ ಭಕ್ತಿಯುಕ್ತನಾಗಿ ಪೂಜಿಸಿದರೆ ಕಲ್ಪದಲ್ಲಿ ಹೇಳಿರುವ ಫಲವು ಸಂಪೂರ್ಣವಾಗಿ

ಲಭಿಸುತ್ತದೆ. ಇತರರು ಒದಗಿಸಿದ ವಸ್ತುಗಳಿಂದ ಪೂಜಿಸಿದರೆ ಅರ್ಧಫಲವು ಲಭ್ಯವಾಗುತ್ತದೆ. ಹೇಗಾದರೂ ಶ್ರದ್ಧಾಭಕ್ತಿಯುಕ್ತನಾಗಿ ಪೂಜಿಸುವುದು ಮುಖ್ಯ.

ಅಶಕ್ತಃ ಕಾರಯೇತ್ ಪೂಜಾಂದದ್ಯಾದ್ವಾರ್ಚನ ಸಾಧನಂ।
ದಾನಾಶಕ್ತಃ ಸಪದ್ಯಾಂತಂ ಪಶ್ಯೇತ್ ತತ್ಪರ ಮಾನಸಃ॥

ಸ್ವಂತವಾಗಿ ಪೂಜೆಮಾಡುವ ಶಕ್ತಿಯಿಲ್ಲದವನು (ಸಾಧಕನ ಮೂಲಕ) ಪೂಜೆಯನ್ನು ಮಾಡಿಸಬೇಕು. ಇಲ್ಲವಾದರೆ ಪೂಜೆಗೆ ಸಲಕರಣೆಗಳನ್ನಾದರೂ ಕೊಡಬೇಕು. ದಾನಮಾಡುವ ಶಕ್ತಿಯೂ ಇಲ್ಲದವನು ಶ್ರದ್ಧಾಭಕ್ತಿಯುತನಾಗಿ ಪೂಜೆಯನ್ನು ಆದ್ಯಂತವಾಗಿ ನೋಡಬೇಕು.

ಸಮ್ಯಕ್ ಶತಕ್ರತೂನ್ ಕೃತ್ವಾ ಯತ್ಫಲಂ ಸಮವಾಪ್ನುಯಾತ್।
ತತ್ಫಲಂ ಲಭತೇಕ್ಕತ್ವಾ ಭಕ್ತ್ಯಾ ಶ್ರೀಚಕ್ರದರ್ಶನಾತ್॥

ಭಕ್ತಿಯಿಂದ ಶ್ರೀ ಚಕ್ರವನ್ನು ದರ್ಶನಮಾಡುವುದರಿಂದ ವಿಧ್ಯುಕ್ತವಾಗಿ ನೂರು ಯಜ್ಞಗಳನ್ನು ಮಾಡಿದ ಫಲವನ್ನು ಹೊಂದುತ್ತಾನೆ.

ಕನ್ಯಾಕುಮಾರಿಯಿಂದ ಹಿಮವತ್ಪರ್ವತದವರೆಗಿನ ಭೂಭಾಗವನ್ನು ಕರ್ಮಭೂಮಿಯೆಂದು ವ್ಯವಹರಿಸುವುದು ರೂಢಿ. ಈ ಭೂಭಾಗದಲ್ಲಿ ಜನಿಸುವುದೂ ಒಂದು ಸುಕೃತ ವಿಶೇಷದ ಫಲ. ಇಂತಿರುವಲ್ಲಿ ಯಾವುದೋ ಒಂದು ಪೂರ್ವ ಜನ್ಮದ ಫಲವಾಗಿ ದ್ವೀಪಾಂತರಗಳಲ್ಲಿ ಜನ್ಮವೆತ್ತಿದ್ದರೂ ಪೂರ್ವಜನ್ಮದ ಸಂಸ್ಕಾರದ ಫಲವಾಗಿ ಈ ಭಾರತಖಂಡಕ್ಕೆ ಬಂದು ಶ್ರೀವಿದ್ಯೋಪಾಸಕರ ನೆರವಿನಿಂದ ತಮ್ಮ ಜನ್ಮವನ್ನೇ ಮುಡಿಪಿಟ್ಟು ಪರಿಶ್ರಮಮಾಡಿ, ಅದರ ಫಲವಾಗಿ Wave of bliss (ಆನಂದ ಲಹರಿ) Serpant Power (ಕುಂಡಲಿನೀ) Sakti and Sakta ಮುಂತಾದ ಉದಾತ್ತ ಗ್ರಂಥಗಳ ಪ್ರಚಾರದ ಮೂಲಕ, ಜಗತ್ತಿನಲ್ಲಿ ಪ್ರಖ್ಯಾತಿ ಪಡೆದು ಮಾತ್ರವಲ್ಲದೆ ಶ್ರೀವಿದ್ಯಾ ಮಹಿಮೆ

ಯನ್ನು ದ್ವೀಪಾಂತರಗಳಲ್ಲಿಯೂ ಮೆರೆಯಿಸಿದ Prof. Sylvan Levis, Sir charles woodroft ಮುಂತಾದ ಮಹನೀಯರ ಉಪಕಾರವನ್ನು ಭಾರತೀಯರಾದ ನಾವು ಈ ಸಂದರ್ಭದಲ್ಲಿ ಸ್ಮರಿಸುವುದು ಅಪ್ರಕೃತವಾಗಲಾರ ದೆಂದು ಭಾವಿಸುತ್ತೇನೆ.

— ಶ್ರೀಃ —

shrinath udupa@gmail.com

ಶ್ರೀ ಶಾರದಾ ಮುದ್ರಣ ಪ್ರಕಾಶನಾಲಯ (ಪ್ರೈ) ಲಿಮಿಟೆಡ್

ಶ್ರೀ ಶಂಕರಮಠ :: ಬೆಂಗಳೂರು-೪